ಕಾಯಕವೇ ಕೈಲಾಸ



# ಸಿದ್ಧಗಂಗಾ



**ಕಾರ್ಮಿಕ ದಿನಾಚರಣೆಯ ಹಾರ್ದಿಕ ಶುಭಾಶಯಗಳು**

ಸಂಪುಟ : ೬೨ ಮೇ ೨೦೨೬ ಸಂಚಿಕೆ : ೦೫



ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ೧೧೯ನೇ ಜಯಂತಿ ಹಾಗೂ ಗುರುವಂದನ ಮಹೋತ್ಸವವನ್ನು ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರು ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ರಾಜ್ಯಪಾಲರಾದ ಶ್ರೀ ಥಾವರಚಂದ್ ಗೆಹ್ಲೋಟ್, ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ ಜೋಶಿ, ಶ್ರೀ ವಿ.ಸೋಮಣ್ಣ, ರಾಜ್ಯ ಸಚಿವರಾದ ಡಾ.ಜಿ.ಪರಮೇಶ್ವರ್, ಶ್ರೀ ಎಂ.ಬಿ.ಪಾಟೀಲ್ ಹಾಗೂ ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಉಪಸ್ಥಿತರಿದ್ದರು.







ಏಪ್ರಿಲ್ ೧ ರಂದು, ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ೧೧೯ನೇ ಜನ್ಮ ಜಯಂತ್ಯೋತ್ಸವ ಹಾಗೂ ಗುರುವಂದನ ಸಮಾರಂಭದಲ್ಲಿ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರಿಗೆ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ಬಸವಣ್ಣನವರ ಪುತ್ಥಳಿ ಹಾಗೂ ಸ್ಮರಣಿಕೆ ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ, ರಾಜ್ಯಪಾಲರು, ಕೇಂದ್ರ ಹಾಗೂ ರಾಜ್ಯ ಸಚಿವರು ಉಪಸ್ಥಿತರಿದ್ದರು.

ತುಮಕೂರು ನಗರದಲ್ಲಿ ನೂತನವಾಗಿ ನಿರ್ಮಿಸಿರುವ
ಅತ್ಯಾಧುನಿಕ ಸೌಕರ್ಯಗಳನ್ನೊಳಗೊಂಡ ವಸತಿಗೃಹ

# ಹೋಟೆಲ್ ಶ್ರೀ ವಿಘ್ನೇಶ್ವರ ಕಂಫರ್ಟ್

ಸರ್ಕಾರಿ ಕಾಲೇಜು ಮುಂಭಾಗ, ಬಿ.ಹೆಚ್. ರಸ್ತೆ, ತುಮಕೂರು-1
ದೂರವಾಣಿ : 2255883, 2257770, 2257774, 2257772 ಫ್ಯಾಕ್ಸ್ : 2255873



- ಮೂರು ವಿವಿಧ ದರ್ಜೆಯ 50 ಸುಸಜ್ಜಿತ ಕೊಠಡಿಗಳು
- ವಿಶೇಷ ವ್ಯವಸ್ಥೆಯ ಹವಾನಿಯಂತ್ರಿತ ಕೊಠಡಿಗಳು
- ಹವಾನಿಯಂತ್ರಿತ ಮಿನಿ ಕಾನ್ಫರೆನ್ಸ್ ಹಾಲ್
- ವಿಶಾಲವಾದ ಪಾರ್ಕಿಂಗ್ ವ್ಯವಸ್ಥೆ
- ಪ್ರತಿ ಕೊಠಡಿಗೆ ಟಿ.ವಿ., ಟೆಲಿಫೋನ್ ಸಂಪರ್ಕ
- ಹವಾನಿಯಂತ್ರಿತ ವಿ.ಐ.ಪಿ. ರೂಂ.
- ಶಾಶ್ವತ ವಿದ್ಯುತ್ ವ್ಯವಸ್ಥೆ
- ಪರಿಣತ ಸಿಬ್ಬಂದಿಯ ವಿನೀತ ಸೇವೆ

**ಲಿಫ್ಟ್ ಸೌಲಭ್ಯವಿದೆ**

**ಹವಾನಿಯಂತ್ರಿತ ಉಪಹಾರ ಗೃಹ**

ಮಾಲೀಕರು : ಎಸ್.ಜಿ. ಚಂದ್ರಮೌಳಿ, ಗ್ರಾನೈಟ್ ಉದ್ಯಮಿ







## ಅಂತರಂಗ



॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥
ಆವಾವ ಕಾಯಕವ ಮಾಡಿದರು ಬಸವೇಶ
ಆವಗಂ ಶರಣರನು ಸೇವಿಪೆನು ಬಸವೇಶ

# ಸಿದ್ಧಗಂಗಾ

ಸಂಪುಟ : ೬೨ ಮೇ ೨೦೨೬ ಸಂಚಿಕೆ : ೦೫

ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು
ಸಂಸ್ಥಾಪಕ ಅಧ್ಯಕ್ಷರು

ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು
ಅಧ್ಯಕ್ಷರು

ಪ್ರಧಾನ ಸಂಪಾದಕರು :
ಹೆಚ್.ವಿ. ವೀರಭದ್ರಯ್ಯ
ಸಂಪಾದಕರು :
ಎಚ್.ಎಸ್. ಸಿದ್ಧಗಂಗಪ್ಪ

ಪ್ರಕಾಶಕರು :
ಕೆ.ಬಿ. ಶಿವಶಂಕರಯ್ಯ
ಮೊ : 91410 36345

ಪತ್ರಿಕಾ ನಿರ್ವಹಣಾ ಸಮಿತಿ :
ಎಂ. ರೇಣುಕಾರಾಧ್ಯ
ಎನ್.ವಿ. ಸತೀಶ್‌ಕುಮಾರ್
ಹೆಚ್.ಎನ್.ಉಮಾಶಂಕರ್

ಪ್ರಕಾಶನ :
ಹಳೆಯ ವಿದ್ಯಾರ್ಥಿಗಳ ಸಂಘ
ಶ್ರೀ ಸಿದ್ಧಗಂಗಾ ಮಠ,
ತುಮಕೂರು ಜಿಲ್ಲೆ–೫೭೨ ೧೦೪.

ಮುದ್ರಕರು :
ಗೀತಾಂಜಲಿ ಗ್ರಾಫಿಕ್ಸ್
ಬಿ–೭೧, ಕೆ.ಎಸ್.ಎಸ್.ಐ.ಡಿ.ಸಿ. ಕೈಗಾರಿಕನಗರ
ರಾಜಾಜಿನಗರ, ಬೆಂಗಳೂರು–೫೬೦ ೦೧೦

ವಿಳಾಸ :
"ಸಂಪಾದಕರು"
'ಸಿದ್ಧಗಂಗಾ' ಮಾಸಪತ್ರಿಕೆ, ಶ್ರೀ ಸಿದ್ಧಗಂಗಾ ಮಠ,
ತುಮಕೂರು ಜಿಲ್ಲೆ–572 104 ದೂ: 0816–2282322.

## ಒಳಪುಟಗಳಲ್ಲಿ ..................

೨ ಸಂಪಾದಕೀಯ

೩ ಶ್ರೀವಾಣಿ

೪ ಸಿದ್ಧಲಿಂಗೇಶ್ವರ ವಚನ – ಶ್ರೀ ಸಿದ್ಧಗಂಗಾ ಗುರುಕರುಣ ತ್ರಿವಿಧಿ

೫ ಭಕ್ತಸಾಗರದ ನಡುವೆ, ಸಡಗರ, ಸಂಭ್ರಮದಿಂದ ನಡೆದ
ಪರಮಪೂಜ್ಯ ಶ್ರೀಗಳವರ ೧೧೯ನೇ ಜಯಂತಿ ಹಾಗೂ
ಗುರುವಂದನ ಮಹೋತ್ಸವ ವರದಿ: ಎಚ್.ಎಸ್.ಸಿದ್ಧಗಂಗಪ್ಪ

೧೯ ಶ್ರೀಮಠಕ್ಕೆ ಭೇಟಿ ನೀಡಿದ ರಾಷ್ಟ್ರಪತಿಗಳು

೨೦ ಪರಮತಪ – ಶ್ರೀ ಸಿದ್ಧೇಶ್ವರ ಸ್ವಾಮಿಗಳು

೨೩ ಬಸವಣ್ಣನೆಂಬ ಜ್ಯೋತಿ (ಕವನ) – ಸುಶೀಲಾ ಸದಾಶಿವಯ್ಯ

೨೪ ಮಾತೆಂಬುದು ಜ್ಯೋತಿರ್ಲಿಂಗ – ಆರ್.ಎಸ್. ಚಾಪಗಾವಿ

೨೬ ಅಭಿನಂದನೆ – ಶ್ರೀ ಎಚ್.ಎಸ್.ಸಿದ್ಧಗಂಗಪ್ಪ ಅವರಿಗೆ
'ಶ್ರೀ ಶಿವರಾತ್ರೀಶ್ವರ' ಪ್ರಶಸ್ತಿ ಪ್ರದಾನ – ಕೆ.ಬಿ.ಶಿವಶಂಕರಯ್ಯ

೨೯ ಶಿವತತ್ತ್ವ ಚಿಂತನಾಗೋಷ್ಠಿ–೩೩ ವರದಿ: ಎಸ್.ಪಿ.ಸಿದ್ಧಲಿಂಗಸ್ವಾಮಿ

೩೦ ಕಲಬುರ್ಗಿಯಲ್ಲಿ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ
ಮಹಾಸ್ವಾಮಿಗಳವರ ಗುರುವಂದನ ಮಹೋತ್ಸವ
ವರದಿ: ದೇವೇಂದ್ರಪ್ಪ ಅವಂಟಿ

೩೨ ಸುದ್ದಿ ಚಿತ್ರಗಳು

| ಚಂದಾ ವಿವರ | ದಶವಾರ್ಷಿಕ ಸದಸ್ಯತ್ವ ರೂ. 2500/–<br>ವಾರ್ಷಿಕ ಚಂದಾ ರೂ. 250.00 ಬಿಡಿ ಪ್ರತಿ ರೂ. 20.00 |
|---|---|

email: siddaganganews@gmail.com

ಲೇಖಕರ ಅಭಿಪ್ರಾಯಗಳು ಪತ್ರಿಕೆಯ ಅಭಿಪ್ರಾಯಗಳಲ್ಲ







# ಸಂಪಾದಕೀಯ........

ಹನ್ನೆರಡನೆ ಶತಮಾನ ರಾಜಕೀಯ ಹಾಗೂ ಧಾರ್ಮಿಕವಾಗಿ ಸಮಷ್ಟಿ ಸಮಾಜದ ಉನ್ನತಿಗಾಗಿ ನಡೆದ ಚಳವಳಿ ಒಂದು ವರ್ಗಕ್ಕೆ, ಒಂದು ಸಮಾಜಕ್ಕೆ ಸೀಮಿತವಾಗಿರಲಿಲ್ಲ. ಆ ಚಳವಳಿ ಒಬ್ಬ ವ್ಯಕ್ತಿಯ ಮಾನಸಿಕ, ಭೌತಿಕದ ಮೇಲೆ ಯಾವುದೇ ರೀತಿಯ ಒತ್ತಾಯವಿಲ್ಲದೆ, ಸಜ್ಜನಿಕೆಯ ರೇಖೆಯನ್ನು ದಾಟದೆ ಬೌದ್ಧಿಕತೆಯನ್ನು ಪ್ರೇರೇಪಿಸುವ ಒಂದು ವಿಶಿಷ್ಟ ವೈಚಾರಿಕ ಚಳವಳಿಯಾಗಿತ್ತು. ಜಾತಿ ರಹಿತ ಆದರ್ಶ ಸಮಾಜ ನಿರ್ಮಾಣ, ಅಂತಹ ಸಮಾಜದ ಸರ್ವಾಂಗೀಣ ಅಭಿವೃದ್ಧಿ ಚಳವಳಿಯ ಹಿಂದಿನ ಆಶಯವಾಗಿತ್ತು. ಕರ್ನಾಟಕದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ನಡೆದ ಧಾರ್ಮಿಕ ಕ್ರಾಂತಿಯ ಜೊತೆಗೆ ಸಾಮಾಜಿಕ ಪರಿವರ್ತನೆಗೆ ಭೂಮಿಕೆ ಸಿದ್ಧವಾಯಿತು. ಬಹುಶಃ ನಮ್ಮ ಧಾರ್ಮಿಕ ಹಾಗೂ ಸಾಮಾಜಿಕ ಇತಿಹಾಸದಲ್ಲಿ ಬಸವಣ್ಣನವರ ವಿಚಾರಗಳು ಸರ್ವರೂ ಪಾಲಿಸುವಂತಹ ಜೀವನ ಆದರ್ಶ ಮೌಲ್ಯಗಳಾಗಿದ್ದವು.

ಬಸವಣ್ಣನವರ ಮುಂದೆ ಆಗ ಎರಡು ಮುಖ್ಯವಾದ ಸಮಸ್ಯೆಗಳಿದ್ದವು. ಮೊದಲನೆಯದು ಧರ್ಮದ ಹೆಸರಿನಲ್ಲಿ ಅಂದಿನ ಸಮಾಜ ನಿರ್ಮಿಸಿಕೊಂಡ ಸಾಮಾಜಿಕ ವಿಷಮತೆ, ಮೇಲು ಕೀಳುಗಳೆಂಬ ಜಾತಿಯ ಗಟ್ಟಿಯಾದ ಅಡ್ಡಗೋಡೆಗಳು, ಇವುಗಳ ಜೊತೆಗೆ ವೈಯಕ್ತಿಕವಾದ ಉಪಾಸನೆಯ ಸಂಪ್ರದಾಯಗಳು ಹಾಗೂ ಆದಕ್ಕೆ ಬೇರು ಬಿಟ್ಟಿದ್ದ ಅಂಧಶ್ರದ್ಧೆಗಳು. ಇವುಗಳ ಪ್ರಭಾವದಿಂದ ಬೆಳೆದು ಬಂದುದು ಸಮಸ್ಯೆಯ ಇನ್ನೊಂದು ಮುಖ. ಈ ಎರಡೂ ಸಮಸ್ಯೆಗಳನ್ನು ಬಸವಣ್ಣನವರ ಪ್ರಖರವಾದ ವಿಚಾರವಾದ ಸಮಸ್ಯೆಯ ಬೇರುಗಳನ್ನು ಕತ್ತರಿಸಿ ಹಾಕಿತು. ಧರ್ಮ ಒಂದು ವರ್ಗಕ್ಕೆ ಮಾತ್ರ ಸೀಮಿತವಲ್ಲ, ಧರ್ಮದ ಎದುರಿನಲ್ಲಿ ಮಾನವರೆಲ್ಲರೂ ಸರ್ವಸಮಾನರು ಎಂಬುದನ್ನು ಸಾಧಿಸಿ ತೋರಿಸುವ ಸಾಹಸಕ್ಕೆ ಕೈ ಹಾಕಿದರು.

ಶರಣರಿಗೆ ಮತ್ಸರದ ಬದುಕು ಮಹತ್ವವಾದುದರಿಂದಲೇ ಸಮಾಜದಲ್ಲಿ ಪಾರ್ಥೇನಿಯಂ ಕಳೆಯಂತೆ ಎಲ್ಲೆಡೆ ವ್ಯಾಪಿಸಿದ್ದ ಅಪಮೌಲ್ಯಗಳು, ಮೂಢನಂಬಿಕೆಗಳು ಹಾಗೂ ಆಷಾಢಭೂತಿತನಗಳ ಅರಿವು ಅವರಿಗೆ ಚೆನ್ನಾಗಿಯೇ ಇತ್ತು. ಆದುದರಿಂದಲೇ ಅವರು ಮೊದಲು ಗಮನಹರಿಸಿದುದು ಜನರ ಬದುಕನ್ನು ಉತ್ತಮೀಕರಿಸಲು ಅಗತ್ಯವಾದ ಜ್ಞಾನದ ಕಡೆಗೆ. ಜ್ಞಾನದ ಮುಂಬೆಳಕಿನಲ್ಲಿ ಅರಿವಿನ ಜ್ಯೋತಿಯನ್ನು ಬೆಳಗಿಸಿಕೊಂಡು ಜೀವನ ಮೌಲ್ಯಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಸ್ವಾಭಿಮಾನದ ಬದುಕನ್ನು ರೂಢಿಸಿಕೊಳ್ಳುವಂತೆ ಮಾಡುವ ಪ್ರಯತ್ನ ಸಾಕಷ್ಟು ಯಶಸ್ವಿಯಾಯಿತೆನ್ನಬಹುದಾದರೂ, ಬಸವಣ್ಣನವರು ನಿರೀಕ್ಷಿಸಿದಷ್ಟು ಯಶಸ್ವಿಯಾಗಲಿಲ್ಲ ಎಂಬ ವಾಸ್ತವವನ್ನು ನಾವು ಗಮನಿಸಬೇಕಾಗುತ್ತದೆ.

ಜ್ಞಾನ ಪಡೆಯುವುದು ಎಲ್ಲರ ಮೂಲಭೂತ ಹಕ್ಕು ಎಂದು ಹೇಳಿ ಅದರಂತೆ ನಡೆದುಕೊಂಡಿದ್ದರಿಂದಲೇ ಆವರೆಗೂ ವಿದ್ಯೆಯಿಂದ ವಂಚಿತರಾಗಿದ್ದ ಸಮಾಜದಲ್ಲಿ ಕೆಳವರ್ಗದವರು ಅಗಸ್ತ್ಯನ ದಾಹದಿಂದ ಜ್ಞಾನಾರ್ಜನೆಯ ಕಾರ್ಯದಲ್ಲಿ ಮಗ್ನವಾಯಿತು. ಕುಂಬಾರರು, ಮಡಿವಾಳರು, ಬೆಸ್ತರು, ರೈತರು, ಕಮ್ಮಾರರು, ಚಮ್ಮಾರರು, ವೈಶ್ಯರು, ಸುಂಕದವರು, ಕಸಗುಡಿಸುವವರು ಹೀಗೆ ವಿಭಿನ್ನ ವೃತ್ತಿಗೆ ಸಂಬಂಧಿಸಿದ ವ್ಯಕ್ತಿಗಳೆಲ್ಲ ಜ್ಞಾನಕ್ಕಾಗಿ ಹಾತೊರೆದುದಷ್ಟೇ ಅಲ್ಲದೆ; ತಾವು ವಿಚಾರವಂತರಾಗಿ ವೈಚಾರಿಕ ಮನೋಭಾವವನ್ನು ಬೆಳೆಸಿಕೊಂಡಿದ್ದಲ್ಲದೆ ಪ್ರತಿಭಾವಂತ ವಚನಕಾರರಾಗಿ ರೂಪುಗೊಂಡು ಒಂದು ವಿಸ್ಮಯ ಲೋಕವನ್ನೇ ನಿರ್ಮಿಸಿದುದು ಒಂದು ಅಪೂರ್ವ ಚಾರಿತ್ರಿಕ ದಾಖಲೆ.

ಬಸವಾದಿ ಶರಣರು ಸಮಾಜಕ್ಕೆ ಅದ್ಭುತ ಕೊಡುಗೆ ಎಂದರೆ ಕಾಯಕ ಮತ್ತು ದಾಸೋಹ ತತ್ತ್ವ. ಸಮಾಜದಲ್ಲಿ ಅಭಿವೃದ್ಧಿ ಪಥದಲ್ಲಿ ಮುನ್ನಡೆಯಬೇಕಾದರೆ ಪ್ರತಿಯೊಬ್ಬರು ದುಡಿಯಬೇಕು ಹಾಗೆ ಪ್ರಾಮಾಣಿಕತೆಯಿಂದ ಬಂದ ಗಳಿಕೆಯಲ್ಲಿ ಸ್ವಲ್ಪಭಾಗವನ್ನು ದಾಸೋಹ ರೂಪದಲ್ಲಿ ಸಮಾಜಕ್ಕೆ ವಿನಿಯೋಗಿಸಬೇಕು ಎಂಬ ಆದರ್ಶದ ತತ್ತ್ವವನ್ನು ಆಚರಣೆಗೆ ತರುವಲ್ಲಿ ಅರಿವು ಮೂಡಿಸಿದರು.

ಬಸವಾದಿ ಶರಣರು ನುಡಿದಂತೆ ನಡೆದರು. ಅವರ ಪರಿಶುದ್ಧವಾದ ಜೀವನ ತೆರೆದಿಟ್ಟ ಪುಸ್ತಕದಂತಿತ್ತು. ನಾವಿಂದು ಅವರು ಬಿತ್ತಿ ಹೋದ ಆದರ್ಶ ಮೌಲ್ಯಗಳನ್ನು ವೇದಿಕೆಗಳಲ್ಲಿ ನುಡಿಯುವುದಕ್ಕಷ್ಟೇ ಸೀಮಿತಗೊಳಿಸಿದ್ದೇವೆ. ಬಸವಣ್ಣನವರು ಅಂತರಂಗ ಶುದ್ಧಿಯಾಗದ ಹೊರತು ಬಹಿರಂಗಕ್ಕೆ ಮೌಲ್ಯ ಬರುವುದಿಲ್ಲ ಎಂದು ಹೇಳಿದರು. ನಾವಿಂದು ಅಂತರಂಗವನ್ನು ಕೊಳಚೆ ಗುಂಡಿಯನ್ನಾಗಿ ಮಾಡಿಕೊಂಡು ಬಹಿರಂಗದ ಸೌಂದರ್ಯಕ್ಕೆ ಹೆಚ್ಚಿನ ಮಹತ್ವ ಕೊಡುತ್ತಾ ಬಂದಿದ್ದೇವೆ. ಅಂತರಂಗ ಶುದ್ಧಿಯಾಗದ ಹೊರತು ಬಹಿರಂಗಕ್ಕೆ ಶೋಭೆ ಬರುವುದಿಲ್ಲ ಎಂಬುದನ್ನು ಮರೆತಿದ್ದೇವೆ.

**ಎಚ್.ಎಸ್.ಸಿದ್ಧಗಂಗಪ್ಪ**
**ಸಂಪಾದಕರು**







# ಶ್ರೀವಾಣಿ

## ಸೃಷ್ಟಿಯ ರಹಸ್ಯ

ಪರಮಾತ್ಮನ ಸೃಷ್ಟಿಯಲ್ಲಿ ಯಾವ ಮೇಲ್ಮೆ, ಶಕ್ತಿ ಉಂಟು ನೋಡಿ. ಇದನ್ನು ವಿಮರ್ಶಿಸುವವರು ಯಾರು? ರಾಗಿ ಕಾಳನ್ನು ಬಿತ್ತುತ್ತಾರೆ. ಮಳೆ ಬರುತ್ತದೆ. ಪೈರು ಬೆಳೆಯುತ್ತದೆ. ಒಂದು ಪೈರು ಹತ್ತು ತೆಂಡೆಯಾಗಿ, ನೂರಾರು ತೆನೆಯಾಗಿ, ಒಂದೊಂದು ತೆನೆಯೂ ಸಹಸ್ರಾರು ಕಾಳಾಗುತ್ತವೆ! ಈ ಶಕ್ತಿ ಎಲ್ಲಿಂದ ಬಂದಿತು? ಈ ಶಕ್ತಿಯನ್ನು ಕೊಟ್ಟವರು ಯಾರು? ದೇವ ಸೃಷ್ಟಿಯ ಮೂಲ ಅಷ್ಟು ಸುಲಭವಾಗಿ ಅರ್ಥವಾಗದು. ಸೂರ್ಯ ಹುಟ್ಟುತ್ತಾನೆ, ಮುಳುಗುತ್ತಾನೆ. ಅವನು ಎಲ್ಲಿಂದ ಬಂದ? ಸೂರ್ಯ ಚಾಚೂ ತಪ್ಪದೆ ನಿಯಮ ಅನುಸರಿಸುತ್ತಾನೆ. ಸೃಷ್ಟಿ ಆಶ್ಚರ್ಯಮಯ. ಅನೇಕ ಅದ್ಭುತ ಘಟನೆ ಹಾಗೂ ಕ್ರಮಬದ್ಧ ಜೀವನವನ್ನು ಸೃಷ್ಟಿಯಲ್ಲಿ ಏರ್ಪಡಿಸಿದವನಾರು? ಎಲ್ಲವೂ ಕ್ರಮ ತಪ್ಪದೆ, ನಿಯಮ ತಪ್ಪದೆ ಯಜಮಾನನ ಅಪ್ಪಣೆಯಂತೆ ಸಾಗುತ್ತದೆ. ಅವನ ಅಪ್ಪಣೆ ಮೀರಿದರೆ ಅವ್ಯವಸ್ಥೆ, ಅರಾಜಕತ್ವ, ಅಂಧಕಾರ, ವಿಶ್ವದ ವ್ಯಾಪಾರ ಕೊಂಚವೂ ಬದಲಾವಣೆ ಇಲ್ಲದೆ ಕ್ರಮವಾಗಿ, ನ್ಯಾಯವಾಗಿ ಸಾಗುತ್ತಿರುತ್ತದೆ. ಇದು ಯಾರ ಆಜ್ಞೆ? ಇದರ ಕರ್ತೃ ಯಾರು? ನಿಯಾಮಕ ಯಾರು? ಒಂದು ಚೈತನ್ಯ ಇದರ ಹಿಂದೆ ನಿಂತಿದೆ ಎಂಬುದಂತೂ ಸ್ಪಷ್ಟವಾಗುತ್ತದೆ. ಈ ವಿಶ್ವಚೈತನ್ಯ ಶಕ್ತಿಯೇ ಪರಮಾತ್ಮ.

ಅವನ ಅಪ್ಪಣೆಯಂತೆ ವಾಯು ಚಲಿಸುತ್ತದೆ. ಜಗತ್ತಿನ ಪ್ರತಿ ವ್ಯಾಪಾರವೂ ನಡೆಯುತ್ತದೆ. ಇಂತಹ ವಿಶ್ವವ್ಯಾಪಾರದ ಮೂಲಶಕ್ತಿಯೇ ಭಗವಂತ. ಭಗವಂತನಲ್ಲಿ ನಂಬಿಕೆ ಹಾರಿತೋ ಜೀವನ ನೀರಸ, ಕಷ್ಟಮಯ, ಅರ್ಥಹೀನ. ಪರಮಾತ್ಮನ ಅಗಾಧಶಕ್ತಿ ಸೃಷ್ಟಿಯಲ್ಲಿ ಗೋಚರವಾಗುತ್ತದೆ. ಅಂತಹ ಸೃಷ್ಟಿಯನ್ನು ಅರ್ಥಮಾಡಿಕೊಳ್ಳುವುದು ಅಷ್ಟು ಸುಲಭವಲ್ಲ. ಪ್ರಾಯಶಃ ಮನುಷ್ಯನ ಯೋಚನಾಶಕ್ತಿಯನ್ನು ಮೀರಿರುವುದು. ತೀವ್ರ ಪ್ರಯತ್ನ ಮತ್ತು ಸಾಧನೆಯಿಂದ ಮಾತ್ರ ವಿಶ್ವರಹಸ್ಯವನ್ನು ಅರಿಯಲು ಸಾಧ್ಯ.

* * *

## ತನ್ನ ಬಣ್ಣಿಸಬೇಡ...

ಇದೊಂದು ಸರಳ, ಸುಂದರ ತತ್ತ್ವ. ಈ ತತ್ತ್ವ ಬಸವನುಡಿಯ ವೈಶಿಷ್ಟ್ಯ. ಆತ್ಮಪ್ರಶಂಸೆ, ವ್ಯಕ್ತಿಯ ವ್ಯಕ್ತಿತ್ವ ವಿಕಾಸದ ಹಾದಿಯಲ್ಲಿ ಒಂದು ಮಹಾಕಂಟಕ. ಆತ್ಮ ಪ್ರಶಂಸೆಗೆ ಒಳಗಾದ ವ್ಯಕ್ತಿ ತನ್ನ ಧ್ಯೇಯ ಧೋರಣೆಗಳನ್ನು ಸರಿಯಾಗಿ ಪಾಲಿಸಲಾರ. ಆದ್ದರಿಂದ ತನ್ನನ್ನು ತಾನೇ ಹೊಗಳಿಕೊಳ್ಳಬಾರದು. ಅಂತೆಯೇ ಇತರರ ಹೊಗಳಿಕೆಗೂ ಬಾಯಬಿಡಬಾರದು. ಲೋಕದಲ್ಲಿ ಇಂದು ಕೆಲವರಂತೂ ಹೊಗಳಿದರೆ ಸಾಕು ಉಬ್ಬಿ ಹೋಗುತ್ತಾರೆ. ಮತ್ತೆ ಕೆಲವರಿಗದು ಸ್ವಕಾರ್ಯ ಸಾಧನೆಯ ಮಾಧ್ಯಮವಾಗಿದೆ. ಆದರೆ ನಮ್ಮ ಶರಣರಿಗೆ ಆತ್ಮಪ್ರಶಂಸೆಗಿಂತಲೂ ಆತ್ಮ ನಿರೀಕ್ಷೆ–ಪರೀಕ್ಷೆಗಳು ಮುಖ್ಯವಾಗಿದ್ದುವು. ಆ ಹೊಗಳಿಕೆಯನ್ನು ಹೊನ್ನಶೂಲವೆಂದು ಭಾವಿಸಿದ್ದರು. ಇದನ್ನು ಬಸವಣ್ಣನವರು 'ಹೊಗಳಿದವರೆನ್ನ ಹೊನ್ನ ಶೂಲದಲಿಕ್ಕಿದರೆಂಬೆ' ಎಂದಿದ್ದಾರೆ.

# ವಚನ–ತ್ರಿವಿಧಿ

## ಶ್ರೀ ಸಿದ್ಧಲಿಂಗೇಶ್ವರ ವಚನ



**ತಾಳಾ ಮರವ ಹಿಡಿದು ತನಿರಸವನುಂಬನ್ನಕ್ಕರ**
**ಬಾರದ ಭವದಲ್ಲಿ ಬಪ್ಪುದು ತಪ್ಪದಾ ನೋಡಾ,**
**ತಾಳಾ ಮರವ ಹಿಡಿಯದೆ, ತನಿರಸವ ಮುಟ್ಟದೆ,**
**ಮೇಲಣ ಹಾಲ ಕುಡಿಯಬಲ್ಲರಾಗಿ ನಿಮ್ಮ ಶರಣರು ಭವವಿರಹಿತರಯ್ಯಾ**
**ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ ॥**

ತಾಳಾಮರವ ಹಿಡಿದು– ಅಷ್ಟಮದಂಗಳಿಗೆ ಮದ್ಯರಸಕ್ಕೆ ಕಾರಣವಾದ ದೇಹವೆಂಬ ಓಲೆ ವೃಕ್ಷವನು ದೃಢವಿಡಿದು; ತನಿರಸವನುಂಬನ್ನಕ್ಕರ – ಸಂಸಾರ ವಿಷಯ ಜಲವನು ಅನುಭವಿಸುವ ಪರಿಯಂತರ ; ಬಾರದ ಭವದಲ್ಲಿ ಬಪ್ಪುದು ತಪ್ಪದು ನೋಡಾ – ಎಲ್ಲಾ ಆತ್ಮರುಗಳು ಹುಟ್ಟಿ ಹುಟ್ಟಿ ಬರುವಂಥಾದ್ದೆ ಮನುಜಯೋನಿ; ದೇವತಾಜನ್ಮ ; ಆಕಳ ಶರೀರ ಅದಲ್ಲದೆ ನಿಕೃಷ್ಟಾದಿ ಯೋನಿ ದ್ವಾರಂಗಳಲ್ಲಿ ಹುಟ್ಟಿ ಹುಟ್ಟಿ ಬರುವಂಥಾದ್ದು ; ತಪ್ಪದು – ಓರೆಯಾಗದು ; ನೋಡಾ–ಕಂಡಾ; ತಾಳಮರನ ಹಿಡಿಯದೆ – ಅಷ್ಟಮದಂಗಳಿಗೆ ಮದ್ಯರಸಕ್ಕೆ ಕಾರಣವಾದ ದೇಹವೆಂಬ ಓಲೆ ವೃಕ್ಷವನು ದೃಢವಿಡಿಯದೆ ; ತನಿರಸವ ಮುಟ್ಟದೆ – ಸಂಸಾರ ವಿಷಯ ಜಲವನು ಸೋಂಕದೆ; ಮೇಲಣ –ಬ್ರಹ್ಮರಂಧ್ರದ; ಹಾಲ–ನಿಷ್ಕಲ ಬ್ರಹ್ಮದ ಚಿದಾಮೃತವನು ; ಕುಡಿದು ಬಲ್ಲರಾಗಿ– ಅನುಭವಿಸಬಲ್ಲವರಾಗಿ; ನಿಮ್ಮ ಶರಣರು – ನಿಮ್ಮ ಶಿವಶರಣರು ; ಭವವಿರಹಿತರಯ್ಯಾ–ಉತ್ಪತ್ಯಕ್ಕೆ ವಿಲಕ್ಷಣರಯ್ಯಾ ; ಮಹಾಲಿಂಗ ಗುರು ಶಿವಸಿದ್ಧೇಶ್ವರ ಪಭುವೇ.

**(ಕೃಪೆ: ತೋಂಟದಾರ್ಯ ವಚನ ವ್ಯಾಖ್ಯೆ– ಸಂಪಾದಕರು– ಡಾ॥ ಸಾ.ಶಿ. ಮರುಳಯ್ಯ, ಪ್ರಕಾಶಕರು, ಶ್ರೀ ತೋಂಟದ ಸಿದ್ಧಲಿಂಗೇಶ್ವರ ಕೈಂಕರ್ಯ (ದಾಸೋಹ) ಸೇವಾ ಸಂಘ (ರಿ.) ಎಡೆಯೂರು–ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ)**

## ಶ್ರೀ ಸಿದ್ಧಗಂಗಾ ಗುರುಕರುಣ ತ್ರಿವಿಧಿ

ಋಷಿಬಾನುಗಳಿಗಿಂತ ಶೀಲ ತಾ ದೊಡ್ಡದು
ಗುರುಲಿಂಗಜಂಗಮದ ಆಭರಣ । ಎನಿಸಿದ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಗುರುವೆ ಪರಮಕರುಣಸಿಂಧುವೆ ಬಂಧುವೆ
ಕರಮುಗಿದು ಬೇಡುವೆನು ಕರುಣಿಸು । ನನ್ನ ತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಹರಿವ ನದಿಯಾಗಿರು ಅರಳುವ ಹೂವಾಗು
ಸುಳಿದು ಸೂಸುವ ತಂಬೆಲರಾಗು । ನನ್ನ ತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಶರಣರ ಚರಿತವ ಅರಿವಿನಿಂದಲಿ ಓದು
ಅರಿವೆ ಕುರುಹೆಂಬುದನರಿಯೆಂದ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಇಷ್ಟಲಿಂಗದ ಪೂಜೆ ನಿಷ್ಠೆಯಿಂದಲಿ ಮಾಡು
ಕಷ್ಟಕಾರ್ಪಣ್ಯ ಹರಿವುದೆಂದರುಹದ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ದೀನರ ದೀಪಕ ಬಡವರಿಗೆ ನೀ ಬಂಧು
ಕೊಡುಗೈಯ ಜಂಗಮ ನನ್ನಸ್ವಾಮಿ । ನನ್ನ ತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಯಾರೂ ಇಲ್ಲದವರಿಗೆ ತಾಯಾದೆ ತಂದ್ಯಾದೆ
ಊರುಗೋಲಾದೆ ನನ್ನ ಸ್ವಾಮಿ । ನನ್ನ ತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಬಸವಪಥದಲಿ ನಡೆದು ಹಸಮಾಡಿಕೊ ಬದುಕ
ಕಸವಾಗದಿರಲಿ ಜೀವನವೂ ಎಂದ್ಹರುಹಿದ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಸಿದ್ಧಗಂಗಾ ಸಾಣೆಗೆ ಗಂಧದ ಕೊರಡಾದೆ
ಸಿದ್ಧರಿಗೆಲ್ಲ ಗುರುವಾದೆ । ನನ್ನ ತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಶರಣ ಸಾಹಿತ್ಯವೆ ಪರಮಪಾವನವೆನುತ
ಅರಿವಿತ್ತು ಕರಸಿರಿಗು ಸಲಹಿದೆ । ನನ್ನ ತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

**ಪ್ರೊ. ಹೆಚ್.ವಿ. ವೀರಭದ್ರಯ್ಯ**



ಕ್ಷೇತ್ರವಾರ್ತೆ

# ಭಕ್ತಸಾಗರದ ನಡುವೆ, ಸಡಗರ, ಸಂಭ್ರಮದಿಂದ ನಡೆದ ಪರಮಪೂಜ್ಯ ಶ್ರೀಗಳವರ ೧೧೯ನೇ ಜಯಂತಿ ಹಾಗೂ ಗುರುವಂದನ ಮಹೋತ್ಸವ

ವರದಿ: **ಎಚ್.ಎಸ್.ಸಿದ್ಧಗಂಗಪ್ಪ** *

ಏಪ್ರಿಲ್ ೧, ೨೦೨೬ ರ ಸೂರ್ಯೋದಯ ಎಂದಿನಂತೆ ಇರಲಿಲ್ಲ. ಒಂದು ರೀತಿಯಲ್ಲಿ ವಿಶಿಷ್ಟವಾಗಿತ್ತು. ಸೂರ್ಯನ ಹೊಂಗಿರಣಗಳು ಸಿದ್ಧಗಂಗಾ ಬೆಟ್ಟದ ಮೂಲಕ ಶ್ರೀಮಠದ ಆವರಣದಲ್ಲಿ ಚೆಲ್ಲಿದ ಸಂದರ್ಭದಲ್ಲಿ ಭಕ್ತರ ಮನಸ್ಸಿನಲ್ಲಿ ಭಕ್ತಿ ಭಾವ ಮುಪ್ಪುರಿಗೊಂಡಿತ್ತು. ೮೯ ವರ್ಷಗಳ ಸುದೀರ್ಘಕಾಲ ಒಂದು ಪೀಠದ ಮೇಲೆ ಕುಳಿತು ಲೋಕಕಲ್ಯಾಣಕ್ಕಾಗಿ ತಮ್ಮ ಬದುಕನ್ನೇ ಸಮರ್ಪಣೆ ಮಾಡಿ, ಲಕ್ಷಾಂತರ ಬಡ, ದೀನ-ದಲಿತರ ಮಕ್ಕಳ ಭವಿಷ್ಯವನ್ನು ರೂಪಿಸಿದ ಮಹಾಶಿಲ್ಪಿಯಾಗಿ, ಗುರುವಾಗಿ, ಮಾರ್ಗದರ್ಶಕರಾಗಿ, ವಾತ್ಸಲ್ಯದ ಮಹಾಮಾತೆಯಾಗಿ, ನೊಂದ ಮನಸ್ಸಿಗೆ ಸ್ವಾಂತನ ನೀಡಿ ಅವರ ಬದುಕಿಗೆ ಭರವಸೆಯನ್ನು ಮೂಡಿಸಿದ ಮಹಾಮಾನವತಾವಾದಿಯಾಗಿ, ಕರುಣೆಯ ಮಹಾಸಾಗರವಾಗಿ, ಹಸಿದು ಬಂದವರರಿಗೆ ಹಸಿವನ್ನು ನೀಗಿಸುವ ಅನ್ನಪೂರ್ಣೇಶ್ವರಿಯಾಗಿ, ಲಕ್ಷಾಂತರ ಭಕ್ತರ, ಹಿರಿಯ ವಿದ್ಯಾರ್ಥಿಗಳ ಆಶಾಜ್ಯೋತಿಯಾಗಿ, ನಡೆದಾಡುವ ದೇವರೆಂದೇ ಜನರ ಮನಸ್ಸಿನಲ್ಲಿ ಹಚ್ಚ ಹಸಿರಾಗಿರುವ ನಮ್ಮೆಲ್ಲರ ಆರಾಧ್ಯದೈವ, ತ್ರಿವಿಧ ದಾಸೋಹಮೂರ್ತಿ, ಪದ್ಮಭೂಷಣ, ಕರ್ನಾಟಕ ರತ್ನ, ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ೧೧೯ನೇ ಜಯಂತಿ ಹಾಗೂ ಗುರುವಂದನ ಮಹೋತ್ಸವವನ್ನು ಕಣ್ತುಂಬಿಸಿಕೊಂಡು, ಭಕ್ತಿಯನ್ನು ಸಮರ್ಪಿಸಿ, ಧನ್ಯತೆಯನ್ನು ಪಡೆಯಲು ದೂರದ ಬೀದರ್, ಗುಲ್ಬರ್ಗ, ಬಳ್ಳಾರಿ,

---

* ೧೬೧೭, ಮಾತೃಶ್ರೀ, ೮ನೇ ಬ್ಲಾಕ್, ಸ್ಫೂರ್ತಿಧಾಮದ ಎದುರು, ಸರ್ ಎಂ.ವಿ. ಮುಂದುವರೆದ ಬಡಾವಣೆ, ಮುದ್ದಿನಪಾಳ್ಯ ಮುಖ್ಯರಸ್ತೆ, ಬೆಂಗಳೂರು-೯೧. ಮೊ: ೯೮೪೫೫ ೬೫೮೭೧



ರಾಯಚೂರು, ಬಾಗಲಕೋಟೆ, ಚಿತ್ರದುರ್ಗ, ಚಿಕ್ಕಮಗಳೂರು, ಮೈಸೂರು, ಚಾಮರಾಜನಗರ, ತುಮಕೂರು ಜಿಲ್ಲೆಗಳಿಂದಲ್ಲದೆ ನೆರೆ ರಾಜ್ಯಗಳಿಂದಲೂ ಭಕ್ತರು, ಅಭಿಮಾನಿಗಳ ದಂಡೇ ಸಮಾವೇಶಗೊಂಡಿತ್ತು.

ಏಪ್ರಿಲ್ ೧, ಪರಮಪೂಜ್ಯ ಶ್ರೀಗಳವರು ಈ ಭೂಮಿಯಲ್ಲಿ ಅವತರಿಸಿದ ಪುಣ್ಯದಿನ. ಹಾಗಾಗಿ ಭಕ್ತರ ಪಾಲಿಗೂ ಪವಿತ್ರವಾದ ದಿನ. ಶ್ರೀಮಠದಲ್ಲಿ ಹಬ್ಬದ ವಾತಾವರಣ, ರಸ್ತೆ ಇಕ್ಕಡೆಗಳಲ್ಲಿ ಬಾಳೆಕಂದು, ತಳಿರು ತೋರಣಗಳಿಂದ ಸಿಂಗಾರ, ಕ್ಯಾತ್ಸಂದ್ರದಿಂದ ಮಠದವರೆಗೂ ಫ್ಲೆಕ್ಸ್‌ಗಳು, ಕಟೌಟ್‌ಗಳು, ಒಟ್ಟಾರೆ ಶ್ರೀಮಠದ ಪರಿಸರವೇ ಶಿವಮಯವಾಗಿತ್ತು.

ಪರಮಪೂಜ್ಯ ಶ್ರೀಗಳವರು ಭೌತಿಕವಾಗಿ ನಮ್ಮ ಜೊತೆ ಇಲ್ಲದೇ ಇದ್ದರೂ, ಭಕ್ತರು, ಹಿರಿಯ ವಿದ್ಯಾರ್ಥಿಗಳು, ಅಭಿಮಾನಿಗಳು ತಮ್ಮ ಹೃದಯದ ದೇಗುಲದ ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಿಕೊಂಡು ಸದಾ ಹೃನ್ಮನಗಳಲ್ಲಿ ಸ್ಮರಿಸುತ್ತಾ, ಪೂಜ್ಯ ಸ್ಥಾನವನ್ನು ನೀಡಿರುವುದರಿಂದ, ಅವರಿಲ್ಲ ಎಂಬ ಭಾವನೆ ನಮ್ಮ ಮನಸ್ಸಿನಲ್ಲಿ ಸುಳಿಯುವುದಿಲ್ಲ. ಶ್ರೀ ಸಿದ್ಧಗಂಗಾ ಕ್ಷೇತ್ರ ಇರುವ ತನಕ ಅವರು ಚಿರಂಜೀವಿಯಾಗಿರುತ್ತಾರೆ. ಅವರ ಶಿವಾತ್ಮ ಶ್ರೀಮಠದ ಸುಳಿಗಾಳಿಯಲ್ಲಿ ಸೇರಿ ಸದಾ ನಮ್ಮನ್ನು ಆಶೀರ್ವದಿಸುತ್ತಿದೆ. ಇಲ್ಲಿ ಒಂದು ಮಾತನ್ನು ಹೇಳಲೇಬೇಕು. ಶ್ರೀಮಠದಲ್ಲಿ ನಡೆಯುವ ಸಮಾರಂಭಕ್ಕೆ ಆಹ್ವಾನಪತ್ರಿಕೆಯನ್ನು ಕೊಡಬೇಕಾಗಿಲ್ಲ. ಭಕ್ತರು ಸ್ವಯಂ ಪ್ರೇರಣೆಯಿಂದ, ಭಕ್ತಿಯಿಂದ ತಂಡೋಪತಂಡವಾಗಿ ಧಾವಿಸುತ್ತಾರೆ.

ಪರಮಪೂಜ್ಯರ ಗದ್ದುಗೆಯನ್ನು ವಿವಿಧ ಬಗೆಯ ಹೂವು ಹಾಗೂ ಹಣ್ಣುಗಳಿಂದ ಅಲಂಕರಿಸಲಾಗಿತ್ತು. ವಿದ್ಯುತ್ ದೀಪಾಲಂಕಾರದಿಂದ ಕೂಡಿದ ಗದ್ದುಗೆಯಲ್ಲಿ ಮುಂಜಾನೆಯಿಂದಲೇ ಧಾರ್ಮಿಕ ವಿಧಿ-ವಿಧಾನಗಳು, ಅಭಿಷೇಕ, ಅಷ್ಟೋತ್ತರ, ಮಹಾಮಂಗಳಾರತಿ, ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ನೇತೃತ್ವದಲ್ಲಿ ಹರಗುರು ಚರಮೂರ್ತಿಗಳ ಉಪಸ್ಥಿತಿಯಲ್ಲಿ ನಡೆಯಿತು.

**ಭವ್ಯ ಮೆರವಣಿಗೆ :** ಪೂಜಾ ವಿಧಾನಗಳು ನಡೆದ ನಂತರ ಬೆಳಿಗ್ಗೆ ೮ ಗಂಟೆಗೆ ರುದ್ರಾಕ್ಷಿ ಮಂಟಪದಲ್ಲಿ ಶ್ರೀಗಳವರ ಕಂಚಿನ ಪುತ್ಥಳಿಯನ್ನಿಟ್ಟು, ಮೆರವಣಿಗೆ ಮಾಡಲಾಯಿತು. ಮೆರವಣಿಗೆಯಲ್ಲಿ ಸುಮಂಗಲಿಯರು ಹೊತ್ತ ೧೧೫ ಕಳಶಗಳೊಂದಿಗೆ ಗದ್ದುಗೆಯಿಂದ ಪ್ರಾರಂಭವಾಗಿ ವಸ್ತುಪ್ರದರ್ಶನದ ಆವರಣದವರೆಗೆ ನಡೆಯಿತು. ಮೆರವಣಿಗೆಯಲ್ಲಿ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು, ಪೂಜ್ಯ ಶ್ರೀ ಶ್ರೀ ಶಿವಸಿದ್ಧೇಶ್ವರ ಸ್ವಾಮಿಗಳು, ಹರಗುರು-ಚರಮೂರ್ತಿಗಳು, ಸಾವಿರಾರು ಭಕ್ತರು ಹೆಜ್ಜೆ ಹಾಕಿದರು. ಮೆರವಣಿಗೆಯಲ್ಲಿ ವೀರಗಾಸೆ, ನಂದೀಧ್ವಜ, ಕರಡಿವಾದ್ಯ, ಚೆಂಡಮದ್ದಳೆ, ಡೊಳ್ಳುಕುಣಿತ ಸೇರಿದಂತೆ ಜನಪದ ಕಲಾ ತಂಡಗಳು ಮೆರವಣಿಗೆಗೆ ಮೆರಗು ನೀಡಿದವು. ಪರಮಪೂಜ್ಯ ಶ್ರೀಗಳವರ ಪುತ್ಥಳಿ ಮೆರವಣಿಗೆ ಸೇವೆಯನ್ನು ಕೆಂಗೇರಿ ಹೋಬಳಿ, ಸೂಲಿಕೆರೆಯ ದಿವಂಗತ ಬಿಡಿಎ ಕೆ.ಬಸವಯ್ಯನವರ ಕುಟುಂಬದವರು ನಡೆಸಿಕೊಟ್ಟರು.



ಶ್ರೀ ಶಿವಯೋಗಿಗಳವರ ಧ್ಯಾನಮಂದಿರದಲ್ಲಿ
ಹರಗುರು ಚರಮೂರ್ತಿಗಳ ಉಪಸ್ಥಿತಿಯಲ್ಲಿ
ಧ್ಯಾನಾಸಕ್ತರಾದ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ
ಮಹಾಸ್ವಾಮಿಗಳವರು



ರುದ್ರಾಕ್ಷಿ ಮಂಟಪದಲ್ಲಿ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ
ಮಹಾಸ್ವಾಮಿಗಳವರ ಕಂಚಿನ ಪುತ್ಥಳಿಯ ಮೆರವಣಿಗೆ









**ಹೆಲಿಪ್ಯಾಡ್‌ನಲ್ಲಿ ಗೌರವಾನ್ವಿತ ರಾಷ್ಟ್ರಪತಿಗಳಿಗೆ ಸ್ವಾಗತ :** ಬೆಳಿಗ್ಗೆ ೧೦.೧೫ಕ್ಕೆ ತುಮಕೂರು ವಿಶ್ವವಿದ್ಯಾಲಯದ ಹೆಲಿಪ್ಯಾಡಿಗೆ ಆಗಮಿಸಿದ ಗೌರವಾನ್ವಿತ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು, ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್‌ಚಂದ್ ಗೆಹ್ಲೋಟ್ ಹಾಗೂ ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ ಜೋಷಿ ಅವರನ್ನು ಜಿಲ್ಲೆಯ ಪರವಾಗಿ ಗೃಹ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಜಿ.ಪರಮೇಶ್ವರ್, ಕೇಂದ್ರ ರಾಜ್ಯ ಸಚಿವ ಶ್ರೀ ವಿ.ಸೋಮಣ್ಣ, ಜಿಲ್ಲಾಧಿಕಾರಿ ಶ್ರೀಮತಿ ಶುಭಕಲ್ಯಾಣಿ, ಜಿಲ್ಲಾ ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಶ್ರೀಮತಿ ಜಿ.ವಿ.ಅಶ್ವಿಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀ ಕೆ.ವಿ.ಅಶೋಕ್, ಶಾಸಕರು, ಗಣ್ಯರು, ಅಧಿಕಾರಿಗಳು ಹೂಗುಚ್ಛ ನೀಡಿ ಗೌರವದಿಂದ ಬರಮಾಡಿಕೊಂಡರು.

**ಗದ್ದುಗೆ ದರ್ಶನ ಮಾಡಿದ ಗಣ್ಯರು :** ಹೆಲಿಪ್ಯಾಡ್‌ನಿಂದ ಕಾರಿನ ಮೂಲಕ ಶ್ರೀಮಠಕ್ಕೆ ಆಗಮಿಸಿದ ರಾಷ್ಟ್ರಪತಿಗಳು ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಶಿವಯೋಗಿಗಳವರ ಗದ್ದುಗೆ ದರ್ಶನ ಮಾಡಿ, ಮಂಗಳಾರತಿ ಬೆಳಗಿ, ಪುಷ್ಪನಮನ ಸಲ್ಲಿಸುವುದರ ಮೂಲಕ ಭಕ್ತಿ ಗೌರವವನ್ನು ಸಲ್ಲಿಸಿದರು. ರಾಷ್ಟ್ರಪತಿಗಳವರನ್ನು ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ಗೌರವದಿಂದ ಗದ್ದುಗೆಗೆ ಬರಮಾಡಿಕೊಂಡರು. ರಾಷ್ಟ್ರಪತಿಗಳೊಂದಿಗೆ, ರಾಜ್ಯಪಾಲರು, ಕೇಂದ್ರ ಸಚಿವರು, ಶಾಸಕರು, ಕಿರಿಯ ಶ್ರೀಗಳಾದ ಪೂಜ್ಯ ಶ್ರೀ ಶ್ರೀ ಶಿವಸಿದ್ಧೇಶ್ವರ ಸ್ವಾಮಿಗಳವರಿದ್ದರು. ಗದ್ದುಗೆ ದರ್ಶನ ಪಡೆದ ರಾಷ್ಟ್ರಪತಿಗಳು ಧ್ಯಾನಮಂದಿರಕ್ಕೆ ಹೋಗಿ, ಮೂರು ನಿಮಿಷಗಳ ಕಾಲ ಭಕ್ತಿಯಿಂದ ಧ್ಯಾನ ಮಾಡಿದರು. ಶಿವಯೋಗ ಮಂದಿರದ ಮುಂದೆ ರಾಷ್ಟ್ರಪತಿಗಳು, ಪರಮಪೂಜ್ಯ ಶ್ರೀ ಶ್ರೀಗಳವರು ಹಾಗೂ ಗಣ್ಯರೊಂದಿಗೆ ಫೋಟೋ ತೆಗೆಸಿಕೊಂಡಿದ್ದು ಒಂದು ಅಪೂರ್ವ ಕ್ಷಣವಾಗಿತ್ತು. ನಂತರ ಶಿವಯೋಗಿಗಳವರ ಗದ್ದುಗೆಯ ಮುಂಭಾಗದ ಮೆಟ್ಟಿಲುಗಳ ಮೇಲೆ ಸಾಲಾಗಿ ಕುಳಿತಿದ್ದ ಮಕ್ಕಳತ್ತ ಮುಗುಳ್ನಗೆಯಿಂದ ಹರ್ಷಚಿತ್ತರಾಗಿ, ಕೈಬೀಸಿದಾಗ ಮಕ್ಕಳು ಖುಷಿಯಿಂದ ಹರ್ಷೋದ್ಗಾರ ಮಾಡಿದರು. ಇದು ವಿದ್ಯಾರ್ಥಿಗಳ ಜೀವನದಲ್ಲಿ ಸದಾ ಹಚ್ಚಹಸಿರಾಗಿರುವ ಸಂದರ್ಭವಾಗಿತ್ತು.







ರಾಷ್ಟ್ರಪತಿಗಳು ಪರಮಪೂಜ್ಯ ಶ್ರೀ ಶ್ರೀ ಶಿವಕುಮಾರ ಶಿವಯೋಗಿಗಳ ಗದ್ದುಗೆ ದರ್ಶನ ಪಡೆದ ನಂತರ ಗದ್ದುಗೆಯ ಕೆಳಗಿನ ಧ್ಯಾನ ಮಂದಿರದಲ್ಲಿ ಕೆಲ ನಿಮಿಷ ಧ್ಯಾನಾಸಕ್ತರಾದ ಸಂದರ್ಭ.





ಶ್ರೀಮಠದ ವಿದ್ಯಾರ್ಥಿಗಳನ್ನು ಕಂಡು ಹರ್ಷಚಿತ್ತರಾದ ರಾಷ್ಟ್ರಪತಿಗಳು



ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಶಿವಯೋಗಿಗಳವರ ಗದ್ದುಗೆ ಮುಂಭಾಗದಲ್ಲಿ ಗೌರವಾನ್ವಿತ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮುಅವರೊಂದಿಗೆ ಪರಮಪೂಜ್ಯ ಶ್ರೀಗಳು ಹಾಗೂ ಗಣ್ಯರು




ಗೌರವಾನ್ವಿತ ರಾಷ್ಟ್ರಪತಿಗಳೊಂದಿಗೆ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರಿಂದ ಉಭಯ ಕುಶೋಲಪಹರಿ

ಶ್ರೀ ಗೋಸಲ ಸಿದ್ಧೇಶ್ವರ ಸಭಾ ವೇದಿಕೆಯಲ್ಲಿ ಆಯೋಜಿಸಲಾಗಿದ್ದ ತ್ರಿವಿಧ ದಾಸೋಹಿ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ೧೧೯ನೇ ಜನ್ಮ ಜಯಂತಿ ಹಾಗೂ ಗುರುವಂದನ ಸಮಾರಂಭವನ್ನು ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ದಿವ್ಯಸಾನ್ನಿಧ್ಯದಲ್ಲಿ ರಾಜ್ಯದ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರಚಂದರ್ ಗೆಹ್ಲೋಟ್, ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ್ ಜೋಷಿ, ಶ್ರೀ ವಿ.ಸೋಮಣ್ಣ, ರಾಜ್ಯ ಸಚಿವರಾದ



ಶ್ರೀ ಎಂ.ಬಿ.ಪಾಟೀಲ್ ಹಾಗೂ ಶ್ರೀಮತಿ ಲಕ್ಷ್ಮೀ ಹೆಬ್ಬಾಳಕರ್ ಅವರ ಉಪಸ್ಥಿತಿಯಲ್ಲಿ ಗೌರವಾನ್ವಿತ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ಅವರು ಜ್ಯೋತಿ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.



ಅವರು ತಮ್ಮ ಉದ್ಘಾಟನಾ ಭಾಷಣ ಪ್ರಾರಂಭಿಸುವ ಮುನ್ನ ಮೂರು ಸಲ **ಓಂ ನಮಃ ಶಿವಾಯ** ಎಂದು ಮಂತ್ರವನ್ನು ಉಚ್ಚರಿಸಿ ಕನ್ನಡದಲ್ಲಿಯೇ ಸಹೋದರ, ಸಹೋದರಿಯರೇ, ನಿಮಗೆ ನನ್ನ ಸಪ್ರೇಮ ವಂದನೆಗಳು ಎಂದು ಹೇಳಿದಾಗ ಪ್ರೇಕ್ಷಕರು ಕರತಾಡನ ಮಾಡುವುದರ ಮೂಲಕ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಅವರು ತಮ್ಮ ಭಾಷಣದಲ್ಲಿ 'ಶ್ರೀ ಶಿವಕುಮಾರ ಸ್ವಾಮೀಜಿಯವರು ಸಹಸ್ರಾರು ಮಕ್ಕಳಿಗೆ ಅನ್ನ, ಅಕ್ಷರ, ಆಶ್ರಯ ನೀಡಿ ಜೀವನದ ಮಾರ್ಗ ತೋರಿಸಿದ್ದಾರೆ. ಬಡವರು, ದೀನದಲಿತರ ಸೇವೆ ಮಾಡಿದ್ದಾರೆ. ಆಧ್ಯಾತ್ಮಿಕ ಸೇವೆ ಮಾಡಿದ್ದಾರೆ. ಸ್ವಾಮೀಜಿ ಇಂದು ನಮ್ಮೊಂದಿಗೆ ದೈಹಿಕವಾಗಿ ಇಲ್ಲವಾದರೂ, ಅವರು ಮಾಡಿದ ಸಾಧನೆ ಜನಮಾನಸದಲ್ಲಿ ಉಳಿದಿದೆ. ಆಧ್ಯಾತ್ಮಿಕ ಪರಂಪರೆಗೆ ಶ್ರೀ ಶಿವಕುಮಾರ ಸ್ವಾಮೀಜಿ ಮತ್ತು ತುಮಕೂರಿನ ಶ್ರೀ ಸಿದ್ಧಗಂಗಾ ಮಠ ಹೆಗ್ಗುರುತಾಗಿದೆ. ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಮಠ ಮುಂಚೂಣಿಯಲ್ಲಿದೆ" ಎಂದು ಬಣ್ಣಿಸಿದರು.

**"ದಯವೇ ಧರ್ಮದ ಮೂಲವಯ್ಯ"** ಎಂಬ ಬಸವಣ್ಣನವರ ಆಶಯದಂತೆ ಸಿದ್ಧಗಂಗಾ ಮಠವು ಎಲ್ಲಾ ಸಮುದಾಯದ ಎಲ್ಲಾ ವರ್ಗದವರಿಗೆ ತ್ರಿವಿಧ ದಾಸೋಹದ ಮೂಲಕ ಸಂಸ್ಕಾರವನ್ನು ನೀಡುತ್ತಿದೆ. ಶತಾಯುಷಿಗಳಾಗಿದ್ದ ಶ್ರೀಗಳು ಸಮಾಜಕ್ಕೆ ಹಾಗೂ ಬಡ ಮಕ್ಕಳ ಅಭ್ಯುದಯಕ್ಕೆ ಬಹಳಷ್ಟು ಕೊಡುಗೆ ನೀಡಿದ್ದಾರೆ. ಸಮಾಜದಲ್ಲಿ ಅಭಿವೃದ್ಧಿಗಾಗಿ ನಿಸ್ವಾರ್ಥವಾದ ಸೇವೆಯನ್ನು ಸಲ್ಲಿಸುವುದರ ಮೂಲಕ ಗ್ರಾಮೀಣ ಭಾರತದ ಜೀವನ ಮಟ್ಟವನ್ನು ಶ್ರೀಮಂತಗೊಳಿಸಿದ್ದಾರೆ. ಸಿದ್ಧಗಂಗಾ ಮಠವು ನಮ್ಮ ದೇಶದ ಪರಂಪರೆಯ ವಿದ್ಯಾದಾನ ಹಾಗೂ ಬಡ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಮಹತ್ವದ ಸ್ಥಾನ ನೀಡಿದ ಪುಣ್ಯಕ್ಷೇತ್ರ" ಎಂದು ಶ್ಲಾಘಿಸಿದರು.

ಅವರು ತಮ್ಮ ಭಾಷಣದಲ್ಲಿ "ಕಾಯಕಯೋಗಿ ಬಸವಣ್ಣನವರು ಹೇಳಿರುವಂತೆ ಕಾಯಕವೇ ಕೈಲಾಸ ಎಂಬ ತತ್ತ್ವ ಅತ್ಯಂತ ಮಹತ್ವವಾದುದು. ಭಗವದ್ಗೀತೆಯಲ್ಲಿ ಕರ್ಮಫಲದ ಬಗ್ಗೆ ಹೇಳಲಾಗಿದೆ. ಕರ್ನಾಟಕದ ಜನತೆ ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡುತ್ತಾ ಬಂದಿದ್ದಾರೆ" ಎಂದು ಹೇಳಿದರು.

"ಬಡವರು ಮತ್ತು ದುರ್ಬಲರ ಸೇವೆಗೆ ತಮ್ಮ ಇಡೀ ಆಯುಷ್ಯವನ್ನು ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ ಅವರು ಮುಡುಪಾಗಿಟ್ಟಿದ್ದರು. ರಾಷ್ಟ್ರನಿರ್ಮಾಣ ಲೋಕಾರ್ಪಣೆ ಹಾಗೂ ಕರ್ತವ್ಯ ನಿಷ್ಠೆಯ ಮಾರ್ಗವನ್ನು ಅನುಸರಿಸುವುದೇ ನಾವು ಶ್ರೀಗಳವರಿಗೆ ಸಲ್ಲಿಸುವ ನಿಜವಾದ ಗುರುವಂದನೆ ಎಂದು ಹೇಳಿದ ರಾಷ್ಟ್ರಪತಿಗಳು ಆಧ್ಯಾತ್ಮಿಕ ಸೇವೆ ಮತ್ತು ಮಾನವೀಯ ಕಾರ್ಯಗಳಿಂದ ಸಮಾಜವನ್ನು ಶ್ರೀಮಂತಗೊಳಿಸಿದರೆಂದು ತಿಳಿದು ಸಂತೋಷವಾಯಿತು. ಬಡವರ, ವಂಚಿತರ ಸೇವೆಗೆ ತಮ್ಮ ಬದುಕನ್ನೇ ಅರ್ಪಿಸಿಕೊಂಡಿದ್ದ ಶ್ರೀಗಳವರ ಜೀವನವೇ ಶ್ರೇಷ್ಠ ಉದಾಹರಣೆ" ಎಂದು ಪ್ರಶಂಸಿಸಿದ ರಾಷ್ಟ್ರಪತಿಗಳು, "ನಮ್ಮ ಸಂಸ್ಕೃತಿಯಲ್ಲಿ ವಿದ್ಯಾದಾನ ತುಂಬಾ ಮಹತ್ವ ಹಾಗೂ ಶ್ರೇಷ್ಠವಾದದ್ದು. ಶಿಕ್ಷಣವೇ ಆತ್ಮನಿರ್ಭರತೆಗೆ ಮಾರ್ಗ ತೋರಿಸುತ್ತದೆ. ಲಕ್ಷಾಂತರ ಬಡ ವಿದ್ಯಾರ್ಥಿಗಳಿಗೆ ಹಾಗೂ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಶಿಕ್ಷಣ ಒದಗಿಸುವ ಮೂಲಕ ಸಮಾಜಕ್ಕೆ ಶ್ರೀಮಠವು ಅಮೂಲ್ಯ ಕೊಡುಗೆ ನೀಡುತ್ತಿದೆ. ಶತಮಾನಗಳಿಂದ ಆಧ್ಯಾತ್ಮದ ಪರಂಪರೆಯನ್ನು ಕಾಲಕ್ಕೆ ತಕ್ಕಂತೆ ಮುಂದುವರಿಸುತ್ತಿರುವುದು ಪ್ರಶಂಶನೀಯ' ಎಂದು ಹೇಳಿದರು.

"ನಮ್ಮ ಸಂಪ್ರದಾಯದಲ್ಲಿ ಒಂದು ಪ್ರಾರ್ಥನೆ ಇದೆ. "ಜೀಮೇತು ಶರದಃ ಶತಮ್" ಅಂದರೆ ನೂರು ವರ್ಷಗಳ ಕಾಲ ಆರೋಗ್ಯವಾಗಿ, ಸಕ್ರಿಯವಾಗಿ ಮತ್ತು ಸ್ವಾವಲಂಬಿಯಾಗಿ ಬದುಕಬೇಕು ಎಂಬುದು ಇದರ ಅರ್ಥ. ಸ್ವಾಮೀಜಿಯವರು ಶತಾಯುಷಿಗಳಾದ ಮೇಲೆಯೂ ತಮ್ಮ ಆಧ್ಯಾತ್ಮಿಕ ಶಕ್ತಿಯಿಂದ ಮಾನವ ಕುಲವನ್ನು ಸಮೃದ್ಧಗೊಳಿಸಿದರು" ಎಂದು ಹೇಳಿದರು.

**ನಾಡಗೀತೆಗೆ ರಾಷ್ಟ್ರಪತಿ ನಮನ : 'ವಂದೇ ಮಾತರಂ'** ರಾಷ್ಟ್ರೀಯ ಗೀತೆಯ ರಚನೆಗೆ ೧೫೦ ವರ್ಷಗಳು ಸಂದಿದ್ದು, ದೇಶಾದ್ಯಂತ ೧೫೦ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದ್ದೇವೆ. ಕನ್ನಡ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗಳಿಸಿದ ರಾಷ್ಟ್ರಕವಿ ಕುವೆಂಪು ಅವರ ಗೀತೆಯನ್ನು ನೆನಪಿಸಿಕೊಳ್ಳಬೇಕು. ಅವರ ಗೀತೆಯಲ್ಲಿ ಕರ್ನಾಟಕ ಮಾತೆಯನ್ನು ಭಾರತ ಮಾತೆಯ ಮಗಳು ಎಂದು ವರ್ಣಿಸಿದ್ದಾರೆ. **'ಭಾರತ ಜನನಿಯ ತನುಜಾತೆ, ಜಯಯೇ ಕರ್ನಾಟಕ ಮಾತೆ'** ಎಂಬ ಅಮರವಾಣಿಯು ದೇಶ ವಾಸಿಗಳ ಹೃದಯದಲ್ಲಿ ಕರ್ನಾಟಕದ ಬಗ್ಗೆ ರಾಷ್ಟ್ರೀಯ ಐಕತೆಯ ಬಗ್ಗೆ ಇರುವ ಹೆಮ್ಮೆಯ ಭಾವನೆಯನ್ನು ಜಾಗೃತಗೊಳಿಸುತ್ತಿದೆ. ಇದೇ ಭಾರತೀಯ ಮೌಲ್ಯಗಳು. ಲಿಂಗೈಕ್ಯ ಶ್ರೀಗಳ ಅಸಾಧಾರಣ ಕೊಡುಗೆಯಲ್ಲಿಯೂ ಪ್ರತಿಫಲಿಸುತ್ತವೆ" ಎಂದು ಅಭಿಪ್ರಾಯಪಟ್ಟರು.




ರಾಷ್ಟ್ರಗೀತೆ ಹಾಗೂ ನಾಡಗೀತೆ ಹಾಡುವಾಗ ಗೌರವ ಸಲ್ಲಿಸುತ್ತಿರುವ ಗಣ್ಯರು



ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವರಾದ ಶ್ರೀ ವಿ.ಸೋಮಣ್ಣ ಅವರು ತಮ್ಮ ಸ್ವಾಗತ ಭಾಷಣದಲ್ಲಿ "ಸಿದ್ಧಗಂಗಾ ಮಠ ಪಾವನ ಭೂಮಿಯಲ್ಲಿ ನಿಂತಾಗಲೆಲ್ಲಾ ಭಕ್ತಿ ಇಮ್ಮಡಿಗೊಳ್ಳುತ್ತದೆ. ಜಗದಗಲಕ್ಕೆ ಶ್ರೀಮಠದ ಸೇವಾ ಕೀರ್ತಿಯನ್ನು ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ವಿಸ್ತರಿಸಿದ್ದಾರೆ. ತ್ರಿವಿಧ ದಾಸೋಹದ ಮೂಲಕ ವಿಶ್ವವೇ ಸಿದ್ಧಗಂಗಾ ಮಠದತ್ತ ತಿರುಗಿ ನೋಡುವಂತೆ ಮಾಡಿದ ಪೂಜ್ಯ ಶ್ರೀಗಳವರ ೧೧೯ನೇ ಜನ್ಮ ಜಯಂತಿಗೆ ರಾಷ್ಟ್ರಪತಿಗಳು, ರಾಜ್ಯಪಾಲರು ಕೇಂದ್ರ ಹಾಗೂ ರಾಜ್ಯ ಸಚಿವರು ಆಗಮಿಸಿದ್ದು, ಅತ್ಯಂತ ಸಂತಸದ ಸಂಗತಿ. ಪೂಜ್ಯ ಸ್ವಾಮೀಜಿಯವರು ವಿಶ್ವ ಪರ್ಯಟನೆ ಮಾಡಲಿಲ್ಲ. ವಿಶ್ವವೇ ಶ್ರೀಮಠದ ಕಡೆಗೆ ನೋಡುವಂತೆ ಮಾಡಿದರು, ವಿಶ್ವದ ಆಧ್ಯಾತ್ಮಿಕ ಭೂಪಟದಲ್ಲಿ ಛಾಪು ಮೂಡಿಸಿದ್ದಾರೆ. ಸಿದ್ಧಗಂಗಾ ಕ್ಷೇತ್ರದ ಹಿರಿಮೆಯನ್ನು ಹೆಚ್ಚಿಸಿದ್ದಾರೆ. ಸ್ವಾಮೀಜಿಯವರು ಸದಾ ಪ್ರಾತಃಸ್ಮರಣೀಯರು, ಬಸವಣ್ಣನವರ ಆದರ್ಶಗಳನ್ನು, ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಾಕಾರಗೊಳಿಸಿದ ಅಭಿನವ ಬಸವಣ್ಣ" ಎಂದು ಹೇಳಿದರು.




ಗೃಹ ಸಚಿವರೂ ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರೂ ಆದ ಡಾ. ಜಿ.ಪರಮೇಶ್ವರ್ ಅವರು ತಮ್ಮ ನುಡಿನಮನದಲ್ಲಿ "ಲಿಂಗೈಕ್ಯ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ಆದರ್ಶ ಸಂತರು. ಸರಳತೆ ಮತ್ತು ಮಾನವೀಯತೆಯ ಮೂಲಕ ಗ್ರಾಮೀಣ ಪ್ರದೇಶದ ಬಡ ಹಾಗೂ ದೀನ ದಲಿತ ವಿದ್ಯಾರ್ಥಿಗಳಿಗೆ ತ್ರಿವಿಧ ದಾಸೋಹ ನೀಡುವುದರ ಮೂಲಕ ಅವರ ಭವಿಷ್ಯ ಉಜ್ವಲವಾಗುವಂತೆ ಮಾಡುವ ಮೂಲಕ ಆದರ್ಶಪ್ರಾಯರಾಗಿದ್ದಾರೆ. ಶ್ರೀ ಸಿದ್ಧಗಂಗಾ ಮಠ ಕೇವಲ ಧಾರ್ಮಿಕ ಕೇಂದ್ರವಲ್ಲದೆ ಸೇವೆಯ ಸಂಕೇತವಾಗಿ ಕಾರ್ಯನಿರ್ವಹಿಸುತ್ತಿದೆ. ಜನ ಸೇವೆಯೇ ಜನಾರ್ಧನ ಸೇವೆ ಎಂದು ಭಾವಿಸಿ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ಸುದೀರ್ಘವಾಗಿ ಸೇವೆ ಸಲ್ಲಿಸಿದರು. ಪ್ರಸ್ತುತ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ಈ ಸೇವಾಕಾರ್ಯವನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ." ಎಂದು ಹೇಳಿದರು.



ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕೇಂದ್ರ ಗ್ರಾಹಕ ವ್ಯವಹಾರಗಳು ಮತ್ತು ಆಹಾರ ಮತ್ತು ಸಾರ್ವಜನಿಕ ವಿತರಣೆ ಹಾಗೂ ನವೀಕರಿಸಬಹುದಾದ ಇಂಧನ ಸಚಿವರಾದ ಶ್ರೀ ಪ್ರಹ್ಲಾದ ಜೋಷಿ ಅವರು ತಮ್ಮ ನುಡಿನಮನದಲ್ಲಿ "ಶ್ರೀ ಸಿದ್ಧಗಂಗಾ ಮಠವು ಕೇವಲ ಆಧ್ಯಾತ್ಮಿಕ ಕೇಂದ್ರವಲ್ಲದೆ, ಆಧುನಿಕ ಸಂಶೋಧನಾ ಕೇಂದ್ರವಾಗಿದೆ. ಸಂಸ್ಕಾರವನ್ನು ಕೊಡುವ ಮೂಲಕ ಭಕ್ತರಿಗೆ ಸನ್ಮಾರ್ಗವನ್ನು ತೋರಿಸುವ ವಿಶ್ವದ ಏಕೈಕ ಮಠ. ಇದಕ್ಕೆ ಕಾರಣ ಪರಮಪೂಜ್ಯ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರಿಗೆ ಹಸಿವಿನ ಅರ್ಥವಾಗಿತ್ತು. ಜಾತಿ, ಧರ್ಮವನ್ನು ಮೀರಿ ಬಡವರು ಹಸಿವಿನಿಂದ ನರಳಬಾರದು, ಹಣವಿಲ್ಲದವರು ಜ್ಞಾನದಿಂದ ವಂಚಿತರಾಗಬಾರದು ಎಂಬ ಧ್ಯೇಯವನ್ನು ಇಟ್ಟುಕೊಂಡಿರುವ ವಿಶ್ವದ ಏಕೈಕ ಮಠ ಇದಾಗಿದೆ. ಈ ಮೂಲಕ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ಮನುಷ್ಯನಿಂದ ಮಹಾದೇವರಾದರು. ಸಿದ್ಧಗಂಗಾ ಮಠಕ್ಕೆ ಬಂದರೆ, ದೇವಲೋಕಕ್ಕೆ ಬಂದಂತೆ ಅನುಭವವಾಗುತ್ತದೆ. ಇದಕ್ಕೆ ಕಾರಣ ಮಹಾನ್ ಶಿವಯೋಗಿಗಳಾದ ಲಿಂಗೈಕ್ಯ ಪರಮಪೂಜ್ಯ

ಡಾ. ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ ಅವರ ಕಾಯಕ ದಾಸೋಹ ತತ್ತ್ವ ಕರ್ನಾಟಕ ದಾಸೋಹದ ಹೆಸರಿನಲ್ಲಿ ಗುರುತಿಸಿಕೊಳ್ಳುವುದಕ್ಕೆ ಶ್ರೀಗಳವರ ಅಪಾರವಾದ ಕೊಡುಗೆ ಇದೆ. ಶ್ರೀಗಳವರ ಕಾರ್ಯವೈಖರಿಯನ್ನು ಮೆಚ್ಚಿದ್ದ, ಈ ರಾಷ್ಟ್ರಕಂಡ ರಾಜಕೀಯ ಮಹಾಮುತ್ಸದ್ಧಿ, ಮಾಜಿ ಪ್ರಧಾನಿ ಶ್ರೀ ಅಟಲ್‌ಬಿಹಾರಿ ವಾಜಪೇಯಿ ಅವರು 'ಉತ್ತರದಲ್ಲಿ ಗಂಗೆ–ದಕ್ಷಿಣದಲ್ಲಿ ಸಿದ್ಧಗಂಗೆ' ಎಂದು ಉದ್ಧರಿಸುವುದರ ಮೂಲಕ ಶ್ರೀಮಠದ ಮಹತ್ವವನ್ನು ಸಾರಿದ್ದರು. ಒಂದು ಪೀಳಿಗೆಯನ್ನೇ ಕಟ್ಟುವ ಕಾರ್ಯ ಮಾಡಿದ ಶ್ರೀಗಳವರು ಆದರ್ಶ ಸೇವೆ, ಸದಾ ಮಾದರಿಯಾದುದು. ಇಡೀ ಜಗತ್ತಿನ ಬೇರೆ ಬೇರೆ ರಾಷ್ಟ್ರದಲ್ಲಿ ಯುದ್ಧದ ಆತಂಕದ ಸನ್ನಿವೇಶದಲ್ಲಿದ್ದರೆ, ಭಾರತದ ಇಂತಹ ಧಾರ್ಮಿಕ ಸಭೆಗಳು ನಡೆಯುತ್ತಿವೆ. ಇದಕ್ಕೆ ಕಾರಣ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು ಅವರಂತಹ ಶ್ರೇಷ್ಠ ಸಂತರು ಬಿಟ್ಟು ಹೋದ ಮಾನವೀಯ ಮೌಲ್ಯ, ಸಂಸ್ಕೃತಿ ಕಾರಣ" ಎಂದರಲ್ಲದೆ, "ರಾಜಕಾರಣಿಗಳು ದೇಶವನ್ನು ಕಾಯುತ್ತಿದ್ದಾರೆ, ಪರಮಪೂಜ್ಯ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ಯುವಪೀಳಿಗೆಯನ್ನು ಮುನ್ನಡೆಸುತ್ತಿದ್ದಾರೆ ಎಂದು ಶ್ರೀ ಅಟಲ್ ಜೀ ಅವರು ಹೇಳಿದ್ದರು. ಅದರಂತೆ ಸಿದ್ಧಗಂಗಾ ಮಠವು ಇನ್ನಷ್ಟು ದೇಶ ಮೆಚ್ಚುವಂತೆ ಸಮಾಜಮುಖಿ ಸೇವೆ ಮಾಡಲಿ" ಎಂದು ಆಶಿಸಿದರು.



ದಿವ್ಯಸಾನ್ನಿಧ್ಯ ವಹಿಸಿದ್ದ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ತಮ್ಮ ಶಿವನುಡಿಗಳಲ್ಲಿ "ನಮ್ಮ ಗುರುಗಳಾದ ಪರಮಪೂಜ್ಯ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮೀಜಿಯವರು ೧೧೧ ವರ್ಷಗಳ ಜೀವಾವಧಿಯಲ್ಲಿ ೮೯ ವರ್ಷಗಳ ಕಾಲ ಮಠದ ಜವಾಬ್ದಾರಿ ವಹಿಸಿಕೊಂಡು ಸಮಾಜ ಸೇವೆಗೆ ತಮ್ಮನ್ನು ಸಮರ್ಪಣಾಭಾವದಿಂದ ಅರ್ಪಿಸಿಕೊಂಡ ಯಾರಾದರೂ ಮಠಾಧಿಪತಿಯಿದ್ದರೆ ಅದು ಪರಮಪೂಜ್ಯ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ಮಾತ್ರ. ಪೂಜ್ಯ ಶ್ರೀಗಳವರ ದಿನಚರಿ, ಆದರ್ಶ, ಆಚಾರ, ವಿಚಾರ, ವಿಸ್ಮಯ ಎಲ್ಲವೂ ಪವಾಡ ಎಂದರೆ ತಪ್ಪಾಗಲಾರದು. ಗ್ರಾಮಾಂತರ ಭಾಗದ ಬಡ ಮಕ್ಕಳಿಗೆ, ಹೆಣ್ಣು ಮಕ್ಕಳಿಗೆ ಶಿಕ್ಷಣ ಸಂಸ್ಥೆಗಳನ್ನು ತೆರೆದು ಲಕ್ಷಾಂತರ ಮಕ್ಕಳಿಗೆ ದಾರೀದೀಪವಾದರು. ಜಾತ್ಯಾತೀವಾಗಿ ಎಲ್ಲಾ ಮಕ್ಕಳಿಗೂ ಆಶ್ರಯವನ್ನು ನೀಡಿ ಪವಿತ್ರ ಕಾರ್ಯವನ್ನು ಪೂಜ್ಯರು ನೆರವೇರಿಸಿಕೊಂಡು ಬಂದಿರುವಂತಹದ್ದು ಈ ನಾಡಿ ಭಾಗ್ಯ ಎಂದರು. ಶ್ರೀಗಳು ತೋರಿದ ಮಾರ್ಗದಲ್ಲೇ ಶ್ರೀಮಠವು ನಿರಂತರ ಸೇವೆಯನ್ನು ಮುಂದುವರೆಸಿದೆ. ಇಡೀ ಭಾರತೀಯ ಮಹಿಳೆಯರಿಗೆ ಸ್ಫೂರ್ತಿಯಾದ ಹೆಮ್ಮೆಯ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರು ಶ್ರೀಗಳವರ ಬಗ್ಗೆ ಗೌರವದಿಂದ ಕಾರ್ಯಕ್ರಮಕ್ಕೆ ಆಗಮಿಸಿದ್ದು ನಮಗೆಲ್ಲ ಸಂತಸ ತಂದಿದೆ" ಎಂದು ಹೇಳಿದರು.



ಗೌರವ ಅತಿಥಿಗಳಾಗಿ ಆಗಮಿಸಿದ್ದ ಸನ್ಮಾನ್ಯ ರಾಜ್ಯಪಾಲರಾದ ಶ್ರೀ ಥಾವರಚಂದ್ ಗೆಹ್ಲೋಟ್ ಅವರು ತಮ್ಮ ನುಡಿನಮನದಲ್ಲಿ "ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮೀಜಿಯವರು ತಮ್ಮ ಸಂಪೂರ್ಣ ಜೀವನವನ್ನು ಅನ್ನದಾಸೋಹ, ವಿದ್ಯಾ ದಾಸೋಹ ಮತ್ತು ಅಕ್ಷರ ದಾಸೋಹದ ತ್ರಿವಿಧ ಸಿದ್ಧಾಂತಗಳಿಗಾಗಿ ಸಮರ್ಪಿಸಿದ್ದಾರೆ. ಅವರಿಗೆ ಸೇವೆ ಎಂಬುದು ಕೇವಲ ಔಪಚಾರಿಕ ಕರ್ತವ್ಯವಾಗಿರಲಿಲ್ಲ. ಬದಲಾಗಿ ಅದೊಂದು ಸಾಧನೆಯಾಗಿತ್ತು. ಹಸಿದವನಿಗೆ ಅನ್ನ, ಜ್ಞಾನ ಮತ್ತು ಸಮಾಜಕ್ಕೆ ಸಂಸ್ಕಾರವನ್ನು ನೀಡುವುದೇ ನಿಜವಾದ ಆಧ್ಯಾತ್ಮಿಕತೆ ಎಂದು ಅವರು ಸಾಬೀತುಪಡಿಸಿದರು. ಅವರು ಮಾನವೀಯತೆಯ ನಿಜವಾದ ಸಂಕೇತವಾಗಿದ್ದರು. ಜಾತಿ ಮತ್ತು ಧರ್ಮಕ್ಕಿಂತ ಮಿಗಿಲಾಗಿ ಸಮಾಜ ಸೇವೆಯನ್ನು ಮಾಡಿದರು" ಎಂದರು.



**ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ೧೧೯ನೇ ಜಯಂತಿಗೆ ಭಕ್ತಿ ನಮನ ಸಲ್ಲಿಸಿದ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು "ಕರುಣೆ, ವಿನಯ ಮತ್ತು ಮನುಕುಲದ ಮೇಲಿನ ಅಚಲ ಸೇವೆಯೆ ಪ್ರತಿರೂಪವಾಗಿ ನಮ್ಮೆಲ್ಲರ ಸ್ಮರಣೆಯಲ್ಲಿ ಜೀವಂತವಾಗಿರುತ್ತೀರಿ ಎಂದು ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಜಯಂತಿಗೆ ಭಾವಪೂರ್ಣ ನಮನ ಸಲ್ಲಿಸಿದ್ದಾರೆ. ಶ್ರೀಗಳವರ ೧೧೯ನೇ ಜಯಂತಿ ಉತ್ಸವದ ಹಿನ್ನೆಲೆಯಲ್ಲಿ ಮಾರ್ಚ್ ೩೧ ರಂದು, ಪ್ರಧಾನಿ ಶ್ರೀ ಮೋದಿಯವರು ತಮ್ಮ ಏಕ್ಸ್ ಖಾತೆಯಲ್ಲಿ ತಮ್ಮ ಭಾವನೆಗಳನ್ನು ಹಂಚಿಕೊಂಡಿದ್ದಾರೆ. ಇತರರ ಉದ್ಧಾರಕ್ಕಾಗಿ ಸಮರ್ಪಿತವಾದ ಜೀವನದ ಮೂಲಕ ನಿಜವಾದ ಮಹತ್ವ ಇತರರಿಗೆ ಸೇವೆ ಸಲ್ಲಿಸುವುದರಲ್ಲಿದೆ ಎಂದು ತೋರಿಸಿಕೊಟ್ಟಿದ್ದಾರೆ" ಎಂದು ಹೇಳಿದ್ದಾರೆ.**

"ಸಿದ್ಧಗಂಗಾ ಮಠವು ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಯನ್ನು ತಂದು ಸಮಾಜವನ್ನು ಸ್ವಾವಲಂಬಿಗಳನ್ನಾಗಿ ಮಾಡುವುದು, ಸಾಮಾಜಿಕ ಮತ್ತು ಸಮೃದ್ಧಿ, ಶ್ರೇಷ್ಠತೆ, ಸಬಲೀಕರಣ, ಉದ್ಯಮಶೀಲತೆ ಹಾಗೂ ಜ್ಞಾನೋದಯಕ್ಕಾಗಿ ಎಲ್ಲರಿಗೂ ಮೌಲ್ಯಯುತ ಶಿಕ್ಷಣವನ್ನು ನೀಡುವ ಪ್ರಮುಖ ಕಾರ್ಯವನ್ನು ಮಾಡುತ್ತಿದೆ. ಸಾಮಾಜಿಕ ಮತ್ತು ಧಾರ್ಮಿಕ ಪ್ರಗತಿಯಲ್ಲಿ ಈ ಮಠದ ಕೊಡುಗೆ ಅತ್ಯಂತ ಶ್ಲಾಘನೀಯವಾಗಿದೆ. ಸ್ವಾಮೀಜಿಯವರ ೧೧೯ನೇ ಜನ್ಮದಿನೋತ್ಸವದಲ್ಲಿ ಭಾಗವಹಿಸಿ ಶ್ರೀಗಳವರ ಗದ್ದುಗೆ ದರ್ಶನ ಪಡೆದಿರುವುದು ನನ್ನ ಸೌಭಾಗ್ಯ ಎಂದು ಭಾವಿಸುತ್ತೇನೆ. ಹಿಂದಿನ ಶ್ರೀಗಳು ಹಾಕಿಕೊಟ್ಟ ಸೇವಾ ಮಾರ್ಗದಲ್ಲಿ ಶ್ರೀ ಸಿದ್ಧಗಂಗಾ ಮಠಾಧ್ಯಕ್ಷರದ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮೀಜಿಯವರು ಮುನ್ನಡೆಸುತ್ತಿದ್ದಾರೆ" ಎಂದು ಶ್ಲಾಘಿಸಿದರು. ಕಾರ್ಯಕ್ರಮವನ್ನು ಡಾ.ಸಿ.ಸೋಮೇಶೇಖರ್ ಅವರು ನಿರೂಪಿಸಿದರು.



ಶ್ರೀಮಠದ ಆವರಣದಲ್ಲಿ ವಜ್ರ ಮಹೋತ್ಸವ ಕಟ್ಟಡ ಮುಂಭಾಗದಲ್ಲಿ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿಯವರ ೧೧೯ನೇ ಜಯಂತಿ ಅಂಗವಾಗಿ ಮೈಸೂರಿನ ಕಲಾವಿದರಾದ ಶ್ರೀ ಪುನೀತ್, ಲಕ್ಷ್ಮೀ, ಶ್ರೀ ಆದಿತ್ಯ, ಶ್ರೀ ಆರ್.ಹರ್ಷಿತ್, ಶ್ರೀ ಕೆ.ಬಿ.ಕುಮಾರಸ್ವಾಮಿ ಅವರು ೮೦೦೦ ಚದರ ಅಡಿ ವಿಸ್ತೀರ್ಣದಲ್ಲಿ ಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರರ ಭಾವಚಿತ್ರವನ್ನು ರಂಗೋಲಿಯಲ್ಲಿ ಬಿಡಿಸಿರುವುದು ನೋಡುಗರ ಕಣ್ಮನ ಸೆಳೆಯಿತು.

**೧೧೯ ಮಕ್ಕಳಿಗೆ 'ಶಿ' ಅಕ್ಷರದ ನಾಮಕರಣ :** ಕಳೆದ ಏಳು ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವಂತೆ ಈ ವರ್ಷವೂ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮೀಜಿ ಅನ್ನದಾನ ಸೇವಾ ಟ್ರಸ್ಟ್ ವತಿಯಿಂದ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ೧೧೯ನೇ ಜನ್ಮ ಜಯಂತಿ ಅಂಗವಾಗಿ ೧೧೯ ಮಕ್ಕಳಿಗೆ 'ಶಿ' ಅಕ್ಷರದಿಂದ ಪ್ರಾರಂಭವಾಗುವ ಹೆಸರುಗಳನ್ನಿಟ್ಟು ನಾಮಕರಣ ಮಾಡಲಾಯಿತು. ನಾಮಕರಣ ಮಹೋತ್ಸವದಲ್ಲಿ ಭಾಗಿಯಾದವರಿಗೆ ಹೊಸ ತೊಟ್ಟಿಲು, ಹಾಸಿಗೆ, ತೊಟ್ಟಿಲ ದಿಂಬು ಹಾಗೂ ಪರಮಪೂಜ್ಯ ಶ್ರೀಗಳವರ ಭಾವಚಿತ್ರವನ್ನು ಉಚಿತವಾಗಿ ನೀಡಲಾಯಿತು.

**ಸಾಂಸ್ಕೃತಿಕ ಕಾರ್ಯಕ್ರಮ :** ಮಧ್ಯಾಹ್ನ ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಬೆಂಗಳೂರಿನ ಜ್ಯೋತಿ ಚೇತನ ತಂಡದವರಿಂದ ವೀಣಾವಾದನ ಹಾಗೂ ಶ್ರೀಮತಿ ಶೈಲಾ ಸಿದ್ಧರಾಮಪ್ಪ ತಂಡದವರಿಂದ ೧೧೯ ಮಹಿಳೆಯರಿಂದ ವಚನ ಗಾಯನ ಪ್ರೇಕ್ಷಕರನ್ನು ರಂಜಿಸುವಲ್ಲಿ ಯಶಸ್ವಿಯಾಯಿತು.







**ದಾಸೋಹ ವ್ಯವಸ್ಥೆ : 'ಶಿವಗಂಗೆ ನೋಟಕ್ಕೆ ಚೆಂದ, ಸಿದ್ಧಗಂಗೆ ಊಟಕ್ಕೆ ಚೆಂದ'** ಎಂಬ ನಾಣ್ನುಡಿ ಈಗ ಹಳೆಯದಾಯಿತು. ಈಗ ಪ್ರಚಲಿತವಿರುವ ನಾಣ್ನುಡಿಯೆಂದರೆ **"ಸಿದ್ಧಗಂಗೆ ನೋಟಕ್ಕೂ ಚಂದ, ಊಟಕ್ಕೂ ಚೆಂದ"** ಎಂಬುದು ಜನಜನಿತವಾಗಿದೆ. ನೂರು ವರ್ಷಗಳಿಂದಲೂ ಶ್ರೀಮಠದಲ್ಲಿ ನಡೆದುಕೊಂಡು ಬಂದಿರುವ ದಾಸೋಹ ಸಂಸ್ಕೃತಿ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಕಾಲದಲ್ಲಿ ವಿಸ್ತಾರಗೊಂಡು **'ನ ಭೂತೋ ನ ಭವಿಷ್ಯತಿ'** ಎಂಬಂತೆ ನಡೆದುಕೊಂಡು ಬರುತ್ತಿದೆ. ಶ್ರೀಮಠದ ಸಮಾರಂಭಗಳಲ್ಲಿ ಭಾಗವಹಿಸುವ ಲಕ್ಷಾಂತರ ಭಕ್ತರಿಗೆ, ಅಭಿಮಾನಿಗಳಿಗೆ ಸ್ವಲ್ಪವೂ ವ್ಯತ್ಯಯವಾಗದಂತೆ ನೋಡಿಕೊಂಡು ಬರಲಾಗುತ್ತಿದೆ. ಬೆಳಿಗ್ಗೆ ಏಳು ಗಂಟೆಯಿಂದ ಉಪಹಾರದಿಂದ ಪ್ರಾರಂಭವಾದ ದಾಸೋಹ ತಡರಾತ್ರಿಯವರೆಗೂ ನಿರಂತರವಾಗಿ ನಡೆಯಿತು. ಸಮಾರಂಭದಲ್ಲಿ ಭಾಗವಹಿಸಿದವರೆಲ್ಲರೂ ಸಂತೋಷದಿಂದ ಪ್ರಸಾದವನ್ನು ಸ್ವೀಕರಿಸಿ ಪೂಜ್ಯ ಶ್ರೀಗಳವರ ಮಹಿಮೆಯನ್ನು ಕೊಂಡಾಡಿದರು.

ಬೆಳಗಿನ ಉಪಹಾರಕ್ಕೆ ಖಾರಾಬಾತ್, ಕೇಸರಿಬಾತ್, ಕಾಫಿ, ಟೀ ಇದ್ದರೆ, ಮಧ್ಯಾಹ್ನದ ದಾಸೋಹಕ್ಕೆ ಸಿಹಿಬೂಂದಿ, ಖಾರಬೂಂದಿ, ಪಾಯಸ, ಚಿತ್ರಾನ್ನ, ಪಲ್ಯ, ಕೋಸಂಬರಿ, ಅನ್ನ ಸಾಂಬಾರು, ಮಜ್ಜಿಗೆ ಸೇರಿದಂತೆ ವಿವಿಧ ಖಾದ್ಯಗಳನ್ನು ಮಾಡಲಾಗಿತ್ತು. ಒಂದು ಅಂದಾಜಿನ ಪ್ರಕಾರ ೧ ಲಕ್ಷಕ್ಕೂ ಹೆಚ್ಚು ಜನ ಪ್ರಸಾದವನ್ನು ಸ್ವೀಕರಿಸಿದರು.

ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ಮಾರ್ಗದರ್ಶನದಲ್ಲಿ, ಕಿರಿಯ ಶ್ರೀಗಳಾದ ಪೂಜ್ಯ ಶ್ರೀ ಶ್ರೀ ಶಿವಸಿದ್ಧೇಶ್ವರ ಸ್ವಾಮಿಗಳವರ ಉಸ್ತುವಾರಿಯಲ್ಲಿ, ಹರಗುರು ಚರಮೂರ್ತಿಗಳ ಸಹಕಾರದೊಂದಿಗೆ, ಶ್ರೀಮಠದ ಶಿಕ್ಷಕರು, ಸಿಬ್ಬಂದಿ ವರ್ಗ, ಭಕ್ತರು ಸೇವಾಭಾವನೆಯಿಂದ ನಗುನಗುತ್ತಾ ಪ್ರಸಾದವನ್ನು ಬಡಿಸಿದುದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಆರು ಕಡೆ ಪ್ರಸಾದ ವ್ಯವಸ್ಥೆಯನ್ನು ಮಾಡಲಾಗಿತ್ತು. ವಿಶೇಷ ಆಹ್ವಾನಿತರಿಗೆ ಪ್ರತ್ಯೇಕವಾದ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

**ಶ್ರೀ ಬಿ.ಎಸ್.ಯಡಿಯೂರಪ್ಪ ಅವರು ಗದ್ದುಗೆಗೆ ಭೇಟಿ :** ಮಾರ್ಚ್ ೩೧ ರಂದು, ಮಾಜಿ ಮುಖ್ಯಮಂತ್ರಿಗಳೂ, ಭಾರತೀಯ ಜನತಾ ಪಕ್ಷದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಬಿ.ಎಸ್.ಯಡಿಯೂರಪ್ಪ ಅವರು ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಶಿವಯೋಗಿಗಳವರ ಗದ್ದುಗೆ ದರ್ಶನ ಮಾಡಿ ಪೂಜೆ ಸಲ್ಲಿಸಿದರು. ಅವರು ಈ ಸಂದರ್ಭದಲ್ಲಿ ಮಾತನಾಡಿ "ಪರಮಪೂಜ್ಯ ಶ್ರೀ ಶ್ರೀಗಳವರ ೧೧೯ನೇ ಜನ್ಮದಿನೋತ್ಸವದ ಶುಭ ಸಂದರ್ಭದಲ್ಲಿ ಗದ್ದುಗೆಗೆ ದರ್ಶನ ಪಡೆಯುವಂತಹ ಸೌಭಾಗ್ಯ ನನಗೆ ಸಿಕ್ಕಿದೆ. ಪ್ರತಿನಿತ್ಯವೂ ನಾನು ಶ್ರೀಗಳನ್ನು ನೆನಪು ಮಾಡಿಕೊಳ್ಳದೆ, ಅವರ ಹೆಸರನ್ನು ಸ್ಮರಿಸದೆ ಯಾವ ಕೆಲಸವನ್ನು ಮಾಡುವುದಿಲ್ಲ. ಪೂಜ್ಯರ ಆಶೀರ್ವಾದ ಸದಾ ನನ್ನ ಮೇಲಿರುತ್ತದೆ" ಎಂದು ಹೇಳಿದರು. ನಂತರ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಶಾಸಕರಾದ ಶ್ರೀ ಜಿ.ಬಿ.ಜ್ಯೋತಿಗಣೇಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಶ್ರೀ ರವಿಶಂಕರ್ ಹೆಬ್ಬಾರ, ಶ್ರೀ ರುದ್ರೇಶ್, ಶ್ರೀ ಮರಿಸ್ವಾಮಿ, ಶ್ರೀ ಹೆಚ್.ಎನ್.ದೀಪಕ್ ಮೊದಲಾದವರಿದ್ದರು.

**ಪೊಲೀಸ್ ವ್ಯವಸ್ಥೆ :** ಭಾರತದ ಘನತೆವೆತ್ತ ಗೌರವಾನ್ವಿತ ರಾಷ್ಟ್ರಪತಿಗಳು ಶ್ರೀಮಠಕ್ಕೆ ಭೇಟಿ ನೀಡುವ ಹಿನ್ನೆಲೆಯಲ್ಲಿ ಬಿಗಿ ಭದ್ರತೆಯನ್ನು ಏರ್ಪಡಿಸಲಾಗಿತ್ತು. ಈ ಭದ್ರತೆಗೆ ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ೧೫ ಸಾವಿರ ಪೊಲೀಸರು ನಿಯೋಜಿತಗೊಂಡಿದ್ದರು. ಆದರೆ ಈ ಕಟ್ಟುನಿಟ್ಟಿನ ಭದ್ರತೆಯಿಂದ ಹಿರಿಯ ನಾಗರಿಕರಿಗೆ ಕಿರಿಕಿರಿಯಾದರೂ ಅವರೆಲ್ಲರೂ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಮೇಲಿನ ಶ್ರದ್ಧಾ ಭಕ್ತಿಯಿಂದ ಸಹನೆಯಿಂದ ಸಹಿಸಿಕೊಂಡು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಎಲ್ಲಿಯೂ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸರು ತಮ್ಮ ಕರ್ತವ್ಯವನ್ನು ನಿರ್ವಹಿಸಿದುದು ವಿಶೇಷವಾಗಿತ್ತು.





ಸಮಾರಂಭ ಯಶಸ್ವಿಯಾಗಲು ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ ಸಿದ್ಧಗಂಗಾ ವಿದ್ಯಾ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಟಿ.ಕೆ.ನಂಜುಂಡಪ್ಪ, ಸಿದ್ಧಗಂಗಾ ವಿದ್ಯಾಸಂಸ್ಥೆಯ ಎಕ್ಸಿಕ್ಯೂಟಿವ್ ಡೈರೆಕ್ಟರ್ (ಆಪರೇಷನ್ಸ್) ಶ್ರೀ ಜಯವಿಭವಸ್ವಾಮಿ, ಶ್ರೀ ಸಿದ್ಧಗಂಗಾ ವಿದ್ಯಾ ಸಂಸ್ಥೆಯ













ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಗುರುವಂದನ ಸಮಾರಂಭದ ಶುಭ ಸಂದರ್ಭದಲ್ಲಿ ಶ್ರೀ ಸುತ್ತೂರು ಜಗದ್ಗುರು ಪರಮಪೂಜ್ಯ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಗದ್ದುಗೆ ದರ್ಶನ ಮಾಡಿ ಭಕ್ತಿ ಸಮರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಶ್ರೀಮಠದ ಕಿರಿಯ ಶ್ರೀಗಳಾದ ಶ್ರೀ ಶ್ರೀ ಶಿವಸಿದ್ಧೇಶ್ವರ ಸ್ವಾಮಿಗಳವರು ಭಕ್ತಿಯಿಂದ ಶ್ರೀ ಸುತ್ತೂರು ಜಗದ್ಗುಳವರನ್ನು ಬರಮಾಡಿಕೊಂಡರು.

ಸಹ ಕಾರ್ಯದರ್ಶಿ ಡಾ. ಶಿವಕುಮಾರಯ್ಯ, ಶ್ರೀಮಠದ ಆಡಳಿತಾಧಿಕಾರಿ ಶ್ರೀ ಎಸ್.ವಿಶ್ವನಾಥಯ್ಯ, ಸಹ ಆಡಳಿತಾಧಿಕಾರಿ ಶ್ರೀ ಪಿ.ಮಲ್ಲಿಕಾರ್ಜುನಯ್ಯ, ತುಮಕೂರು ಜಿಲ್ಲಾಡಳಿತ ಸೇರಿದಂತೆ ಶ್ರೀಮಠದ ಭಕ್ತರು ಹಗಲಿರುಳು ಸಮರ್ಪಣಾಭಾವದಿಂದ ಶ್ರಮಿಸಿ ಸಮಾರಂಭವನ್ನು ಚೆಂದಗೊಳಿಸಿದರು. ಇವರೆಲ್ಲರಿಗೂ ಸಿದ್ಧಗಂಗಾ ಹೃತ್ಪೂರ್ವಕ ಅಭಿನಂದನೆಗಳನ್ನು, ಧನ್ಯವಾದಗಳನ್ನು ಸಲ್ಲಿಸುತ್ತದೆ.

## ತುಮಕೂರು ನಗರದಲ್ಲಿ ಸಂಭ್ರಮದಿಂದ ಆಚರಿಸಿದ ೧೧೯ನೇ ಜಯಂತಿ ಆಚರಣೆ

ತುಮಕೂರು ನಗರದಲ್ಲಿ ಹಬ್ಬದ ವಾತಾವರಣ, ತುಮಕೂರಿನ ವಿವಿಧೆಡೆ, ವಿವಿಧ ಸಂಘ ಸಂಸ್ಥೆಗಳು ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ೧೧೯ನೇ ಜಯಂತಿಯನ್ನು ಶ್ರದ್ಧಾ ಭಕ್ತಿಯಿಂದ ಆಚರಿಸುವುದರ ಮೂಲಕ ಭಕ್ತಿ ನಮನವನ್ನು ಸಲ್ಲಿಸಲಾಯಿತು. ನಗರದ ಪ್ರಮುಖ ವೃತ್ತಗಳಲ್ಲಿ ಸ್ವಾಮೀಜಿಯವ ಭಾವಚಿತ್ರಕ್ಕೆ ಪುಷ್ಪನಮನ ಅರ್ಪಿಸುವುದರ ಜೊತೆಗೆ ದಾಸೋಹ ವ್ಯವಸ್ಥೆಯನ್ನು ಮಾಡಲಾಗಿತ್ತು. ತುಮಕೂರು ವಿಶ್ವವಿದ್ಯಾಲಯದ ಮುಂಭಾಗ, ಭದ್ರಮ್ಮ ಛತ್ರ ವೃತ್ತ, ಪುರಭವನದ ವೃತ್ತ, ಕುಣಿಗಲ್ ರಸ್ತೆ ಸೇರಿ ವಿವಿಧ ಕಡೆಗಳಲ್ಲಿ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಮುಖಂಡರು ದಾಸೋಹವನ್ನು ವ್ಯವಸ್ಥೆ ಮಾಡುವುದರ ಮೂಲಕ ಶ್ರೀಮಠದ ದಾಸೋಹ ಸಂಸ್ಕೃತಿಯನ್ನು ಸಾಕಾರಗೊಳಿಸಿದರು. ಇವುಗಳ ಜೊತೆಗೆ ಶಾಲಾ ಕಾಲೇಜುಗಳಲ್ಲಿಯೂ ಜಯಂತಿಯನ್ನು ಆಚರಿಸಲಾಯಿತು.

ನಗರದ ಬಾಳನಕಟ್ಟೆ ಕಲ್ಯಾಣ ಮಂಟಪದಲ್ಲಿ ಪರಮಪೂಜ್ಯ ಶ್ರೀ ಶ್ರೀಗಳವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಭಕ್ತಿಯನ್ನು ಸಮರ್ಪಿಸಲಾಯಿತು. ವಾಹನ ಸವಾರರಿಗೆ-ಸಾರ್ವಜನಿಕರಿಗೆ ಮಜ್ಜಿಗೆ, ಪಾನಕ ವಿತರಿಸಲಾಯಿತು. ಕೋತಿತೋಪಿನ ರಸ್ತೆ ಬದಿಯಲ್ಲಿ ಹೋಟೆಲ್ ವ್ಯಾಪಾರ ಮಾಡುವ ಶ್ರೀ ಕಿರಣ್ ಅವರು ಸಾರ್ವಜನಿಕರಿಗೆ ಉಚಿತವಾಗಿ ಬೆಳಗಿನ ಉಪಹಾರ ವಿತರಿಸುವುದರ ಮೂಲಕ ಭಕ್ತಿ ನಮನವನ್ನು ಸಲ್ಲಿಸಿದರು.

# ಶ್ರೀಮಠಕ್ಕೆ ಭೇಟಿ ನೀಡಿದ ರಾಷ್ಟ್ರಪತಿಗಳು



ಏಪ್ರಿಲ್ ೨೪, ೧೯೮೨ ರಂದು ನಡೆದ ಸುವರ್ಣ ಮಹೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ರಾಷ್ಟ್ರಪತಿಗಳಾಗಿದ್ದ ಶ್ರೀ ನೀಲಂ ಸಂಜೀವರೆಡ್ಡಿ ಅವರು



ಮಾರ್ಚ್ ೨೨, ೧೯೯೭ ರಂದು ನಡೆದ ವಜ್ರ ಮಹೋತ್ಸವ ಉದ್ಘಾಟನಾ ಸಮಾರಂಭದಲ್ಲಿ ರಾಷ್ಟ್ರಪತಿಗಳಾಗಿದ್ದ ಶ್ರೀ ಶಂಕರ ದಯಾಳ ಶರ್ಮ ಅವರು



ಏಪ್ರಿಲ್ ೭, ೨೦೦೬ ರಂದು ನಡೆದ ಪರಮಪೂಜ್ಯ ಶ್ರೀಗಳವರ ೯೯ನೇ ಗುರುವಂದನ ಹಾಗೂ ಏಪ್ರಿಲ್ ೮, ೨೦೦೭ ರಂದು ನಡೆದ ೧೦೦ನೇ ಜನ್ಮಶತಮಾನೋತ್ಸವ ಹಾಗೂ ಗುರುವಂದನ ಸಮಾರಂಭದಲ್ಲಿ ರಾಷ್ಟ್ರಪತಿಗಳಾಗಿದ್ದ ಶ್ರೀ ಅಬ್ದುಲ್ ಕಲಾಂ ಅವರು



ಏಪ್ರಿಲ್ ೧, ೨೦೦೮ ರಂದು ೧೦೧ನೇ ಜನ್ಮ ಜಯಂತಿ ಹಾಗೂ ಗುರುವಂದನಾ ಸಮಾರಂಭದಲ್ಲಿ ರಾಷ್ಟ್ರಪತಿಗಳಾಗಿದ್ದ ಶ್ರೀಮತಿ ಪ್ರತಿಭಾ ದೇವಿಸಿಂಗ್ ಪಾಟೀಲ್ ಅವರು







ಚಿಂತನ

# ಪರಮತಪ

– ಶ್ರೀ ಸಿದ್ಧೇಶ್ವರ ಸ್ವಾಮಿಗಳು *

ಅಜ್ಞಾನದ ಆಧಾರದಲ್ಲಿ ರಾಗಾದಿ ಭಾವಬಂಧನಗಳು ಬೆಳೆದು ಬಲಿಷ್ಠವಾಗುತ್ತವೆ. ಈ ಭಾವಬಂಧನಗಳಿಗೆ ಬೇಕಾದ ಪೌಷ್ಠಿಕಾಂಶವು ಅಜ್ಞಾನದಲ್ಲಿದೆ. ಈ ಅಜ್ಞಾನವನ್ನು ಇಟ್ಟುಕೊಂಡು ಬಂಧನಗಳನ್ನು ಕಡಿದುಹಾಕಲಾಗದು. ಅಜ್ಞಾನವಳಿದರೆ ಎಂಥಾ ಬಲಿಷ್ಠ ಭಾವಬಂಧನವಿದ್ದರೂ ಅದು ತನಗೆ ತಾನೇ ಕಳಚಿಕೊಂಡು ಬಿಡುತ್ತದೆ. ಅಜ್ಞಾನಕ್ಕೂ ಈ ಬಾಧಕಭಾವಗಳಿಗೂ ಅಷ್ಟು ಘನಿಷ್ಠ ಸಂಬಂಧ. ಬಂಧನವು ನಮ್ಮ ಭಾವದಲ್ಲಿ ಉಂಟಾಗುತ್ತದೆ. ನಮ್ಮ ಅಂತರಂಗದಲ್ಲಿ ಇರುವ ರಾಗಾದಿ ಭಾವನೆಗಳೇ ಬಂಧನಕ್ಕೆ ಕಾರಣ. ಈ ರಾಗಾದಿ ಭಾವನೆಗಳಿಂದ ನಮ್ಮ ಮನಸ್ಸು ಪ್ರಾಪಂಚಿಕ ವಿಷಯ ವಸ್ತುಗಳಿಗೆ ಅಂಟಿಕೊಳ್ಳುತ್ತದೆ. ಅದೇ ಬಂಧನ.

ಜಗತ್ತು ಎಂದರೆ ಅಸಂಖ್ಯ ವಸ್ತುಗಳ ಸಮೂಹ. ಈ ಜಗತ್ತಿನಿಂದ ಎಂದೂ ವಸ್ತುಗಳನ್ನು ತೆಗೆದು ಹಾಕಲಿಕ್ಕೆ ಆಗುವುದಿಲ್ಲ. ನಮ್ಮಲ್ಲಿ ಇಂದ್ರಿಯಗಳಿವೆ. ಹೊರಗೆ ವಿಷಯಗಳಿವೆ. ಆದ್ದರಿಂದ ನಾವೀ ಜಗತ್ತಿನಲ್ಲಿ ಇರುವವರೆಗೆ ನಮಗೆ ವಿಷಯ ವಸ್ತುಗಳ ಸಂಪರ್ಕ ಅನಿವಾರ್ಯ. ಮೇಲಾಗಿ ಈ ಜಗತ್ತಿನಲ್ಲಿ ವಿಷಯಗಳಿರುವುದು ನಮ್ಮ ಅನುಭವಕ್ಕಾಗಿಯೇ. ನಾವೀ ಪ್ರಪಂಚದಲ್ಲಿ ಇರುವವರೆಗೆ ಕೇಳಬೇಕು, ನೋಡಬೇಕು, ಮಾಡಬೇಕು. ಆದರೆ ನಾವು ಕೇಳಿದ ಶಬ್ದಗಳಲ್ಲಿ, ನೋಡಿದ ರೂಪದಲ್ಲಿ, ಮಾಡಿದ ಮಾಟದಲ್ಲಿ ಬಂಧಿತರಾಗಬಾರದು ಅಷ್ಟೆ. ಶಬ್ದಾದಿ ವಿಷಯಗಳು ಜಡವಾಗಿವೆ. ಅವು ನಮ್ಮನ್ನೆಂದೂ ಕಟ್ಟಿ ಹಾಕಲಾರವು. ನಮ್ಮನ್ನು ನಾವೇ ಆ ವಿಷಯಗಳಿಗೆ ಕಟ್ಟಿಹಾಕಿ ಕೊಳ್ಳುತ್ತೇವೆ.

ಇಲ್ಲೊಂದು ಗಡಿಯಾರವಿದೆ. ಅದೇನು ತಾನಾಗಿಯೇ ನನ್ನನ್ನು ಕಟ್ಟಿಹಾಕುವುದಿಲ್ಲ. ನಾನೇ ಆ ಗಡಿಯಾರವನ್ನು ಬೇಡಿ, ಬಯಸಿ ನನ್ನ ಕೈಗೆ ಕಟ್ಟಿಕೊಳ್ಳುತ್ತೇನೆ. ನಂತರ ಇದು ನನ್ನ ಗಡಿಯಾರ ಎನ್ನುತ್ತೇನೆ. ಆದರ ವ್ಯಾಮೋಹಕ್ಕೆ ಒಳಗಾಗುತ್ತೇನೆ. ಇದು ಬಂಧನ. ಅದೇ ಗಡಿಯಾರನ್ನು ಇನ್ನೊಬ್ಬರು ಎತ್ತಿಕೊಂಡು ಹೋದರೂ ಅದು ಸುಮ್ಮನೇ ಇರುತ್ತದೆ. 'ನೀನೇಕೆ ನನ್ನನ್ನು ಒಯ್ಯುತ್ತೀ? ನನ್ನ ಯಜಮಾನ ಬೇರೆ ಇದ್ದಾನೆ' ಎಂದು ಅದು ಪ್ರತಿಭಟಿಸುವುದಿಲ್ಲ. ವಸ್ತುಗಳು ನಮ್ಮನ್ನು ಎಂದೂ ಬಂಧಿಸುವುದಿಲ್ಲ. ನಮ್ಮ ರಾಗಾದಿ ಭಾವಗಳೇ ನಮ್ಮನ್ನು ಈ ಪ್ರಪಂಚಕ್ಕೆ ಬಂಧಿಸುತ್ತದೆ.

ಇದೊಂದು ಭವ್ಯವಾದ ಸಮಾಜಮಂದಿರ. ಪ್ರಶಾಂತ ವಾತಾವರಣ. ಇಲ್ಲಿ ಪ್ರತಿದಿನ ನೂರಾರು ಜನರು ಬರುತ್ತಾರೆ, ಹೋಗುತ್ತಾರೆ. ಕೆಲವು ಜನರು ಈ ಮಂದಿರದಲ್ಲಿ ಆನಂದವಾಗಿ ಇರುತ್ತಾರೆ. ಇದು ಹೀಗೆಯೇ ವರ್ಷವಿಡೀ ನಡೆಯುತ್ತದೆ. ಆದರೆ ಅವರಾರೂ ಆ ಭವ್ಯಮಂದಿರದ ವ್ಯಾಮೋಹಕ್ಕೆ ಬಂಧನಕ್ಕೆ ಒಳಗಾಗುವುದಿಲ್ಲ. ನಾನು ಒಂದು ಸಣ್ಣ ಗುಡಿಸಲನ್ನೇ ಕಟ್ಟಿಸಿ, ಇದು 'ನನ್ನದು' ಎನ್ನುತ್ತೇನೆ. ಅದೇ ಕ್ಷಣ ಗುಡಿಸಲು ನನ್ನನ್ನು ಬಂಧಿಸಿಬಿಡುತ್ತದೆ.

ಮನೆ–ಮಠ, ಸತಿ–ಸುತರು, ಧನ–ಕನಕಾದಿಗಳು ನಮ್ಮನ್ನು ಕಟ್ಟಿಹಾಕುವುದಿಲ್ಲ. ಇದು 'ನನ್ನದು' ಎಂಬ ಭಾವವು ನಮ್ಮನ್ನು ಈ ಸಂಸಾರಕ್ಕೆ ಬಂಧಿಸುತ್ತದೆ. ನನ್ನ ಮನೆಯನ್ನು ಮಾರಿದರೆ ಆ ಮನೆಯೇನು ದುಃಖಿಸುವುದಿಲ್ಲ. ರಾಜ, ಮಹಾರಾಜರು ಅರಮನೆಯನ್ನೇ ಮಾರುತ್ತಾರೆ. ಆದರೆ ಆ ಅರಮನೆ ಎಂದೂ ಮರುಗುವುದಿಲ್ಲ. ಮನುಷ್ಯನಿಗೆ ಮಾತ್ರ ಮರುಗುವುದು ತಪ್ಪುವುದಿಲ್ಲ. ಏಕೆಂದರೆ ವಸ್ತುಗಳಿಗೇನು ರಾಗಾದಿ ಭಾವನೆಗಳಿಲ್ಲ. ಬಂಧನಗಳೂ ಇಲ್ಲ. ರಾಗಾದಿ ಭಾವಗಳು, ಬಂಧನಗಳು ಎಲ್ಲಾ ಇರುವುದು ಮನುಷ್ಯನಿಗೇ !

ಇದರರ್ಥ ನಮ್ಮಲ್ಲಿ ರಾಗಾದಿ ಭಾವನೆಗಳೇ ಇರಬಾರದು ಎಂದಲ್ಲ. ಒಳ್ಳೆಯ ವಸ್ತುಗಳಲ್ಲಿ ಪ್ರೇಮ, ಕೆಟ್ಟ ವಿಷಯಗಳಲ್ಲಿ ದ್ವೇಷ, ಅನ್ಯಾಯ ಕಂಡರೆ ರೋಷ, ತಾನು ಗಳಿಸಿದ್ದರಲ್ಲಿ ಅಭಿಮಾನ, ಮಾಡಬೇಕಾದ ಮಹತ್ಕಾರ್ಯಗಳ ಚಿಂತೆ ಮೊದಲಾದ ಭಾವನೆಗಳು ನಮ್ಮಲ್ಲಿ ಇರಬೇಕು. ಆದರೆ ಅವು ನಮ್ಮನ್ನು ಬಂಧಿಸಬಾರದಷ್ಟೆ ! ಈ ಪ್ರಪಂಚದ ಸ್ವಭಾವವೇ ವಿಚಿತ್ರ. ಒಮ್ಮೆ ಅದು ನಮಗೆ ಸುಖ ಕೊಡುತ್ತದೆ. ಇನ್ನೊಮ್ಮೆ ದುಃಖ ತರುತ್ತದೆ. ಈ ಜೀವನವು ಸುಖ–ದುಃಖಗಳ ಸಮ್ಮಿಶ್ರಣ. ಸಂಸಾರದಲ್ಲಿ ಬರೀ ದುಃಖವಿದ್ದರೆ ಅದರಿಂದ ಪಾರಾಗಲು ಪ್ರಯತ್ನಿಸಬಹುದು. ಅಥವಾ ಬರೀ ಸುಖವೇ ಇದ್ದರೆ, ಅನುಭವಿಸುತ್ತಾ ಸುಮ್ಮನಾದರೂ ಇರಬಹುದು.

ಈ ಪ್ರಪಂಚವೆಂದರೆ ಒಂದು ರೀತಿ ನಿಯತಕಾಲಿಕವಾಗಿ ಬರುವ ತಲೆನೋವು ಇದ್ದಂತೆ. ಈಗೇನೂ ತಲೆನೋವಿಲ್ಲ. ನೆಮ್ಮದಿಯಿಂದ ಇರಬಹುದು ಎನ್ನುವುದರಲ್ಲಿ ತಲೆಶೂಲೆ ಪ್ರಾರಂಭವಾಗುತ್ತದೆ. ಹೇಗಪ್ಪಾ ಈ ತಲೆನೋವಿನಿಂದ ಪಾರಾಗುವುದು, ದೇವರು ಈ ತಲೆಯನ್ನಾದರೂ ಏಕೆ ಕೊಟ್ಟನೋ ಎನ್ನುವಷ್ಟರಲ್ಲಿ ತಲೆನೋವು ಮಾಯವಾಗಿರುತ್ತದೆ.

* ಜ್ಞಾನಯೋಗಾಶ್ರಮ, ಬಿಜಾಪುರ ಜಿಲ್ಲೆ.

ಹಾಗೆಯೇ ಈ ಸಂಸಾರವು ಒಮ್ಮೆ ರುಚಿರುಚಿ, ಮತ್ತೊಮ್ಮೆ ಕಹಿಕಹಿ, ಅದು ಬೇವುಬೆಲ್ಲದ ಸಮ್ಮಿಶ್ರಣ. ಒಮ್ಮೊಮ್ಮೆ ಈ ಸಂಸಾರ ತಾಪ ಹೆಚ್ಚಾಗಿ, ಈ ಜೀವನವೇ ಸಾಕೆನ್ನಿಸುತ್ತದೆ. ಅಷ್ಟರಲ್ಲಿ ಸಂಸಾರವು ಒಂದಿಷ್ಟು ಸುಖದ ನೀರನ್ನು ಎರಚುತ್ತದೆ. ನಮ್ಮ ತಾಪ ಒಂದಿಷ್ಟು ಕಳೆದಂತೆ ಮಾಡಿ ನಮ್ಮನ್ನು ಈ ಸಂಸಾರಕ್ಕೆ ಬಿಡದಂತೆ ಕಟ್ಟಿಹಾಕುತ್ತದೆ.

ಒಂದು ಊರು. ಧನಿಕ ದಂಪತಿಗಳು. ಅವರ ಮನೆಯಲ್ಲಿ ಒಂದು ಹಸು, ಸಾಧುಪ್ರಾಣಿ. ಮನೆಯ ಒಡತಿಗೆ ಹಸುವಿನ ಮೇಲೆ ಬಹಳ ಪ್ರೇಮ. ಏಕೆಂದರೆ ಹಸು ಚೆನ್ನಾಗಿ ಹಾಲು ಕೊಡುತ್ತಿತ್ತು. ಮನೆಯ ಒಡೆಯನಿಗೂ ಹಸುವಿನ ಮೇಲೆ ಅಷ್ಟೇ ಪ್ರೇಮ. ಏಕೆಂದರೆ ಹಸು ಮನೆಯೊಳಗೆ ಹಾಲು ಹಾಕಿದಾಗಿನಿಂದ ಮನೆ ಅಭಿವೃದ್ಧಿಯಾಗಿತ್ತು.

ಬೆಳಿಗ್ಗೆ ಮನೆಯ ಒಡತಿ ಹಸುವಿನ ಪೂಜೆ ಮಾಡಿ, ಕುಂಕುಮ ಹಚ್ಚಿ ನಮಸ್ಕಾರ ಮಾಡಿ ಬಯಲಿಗೆ ಬಿಟ್ಟು ಬಿಡುವಳು. ಅದು ದಿನದ ತುಂಬ ಅಲ್ಲಿ ಇಲ್ಲಿ ಮೇದು ಸಂಜೆ ಮನೆಗೆ ಬರುವುದು. ಮನೆಯ ಒಡತಿ ಹಾಲು ಕರೆದು ಹಸುವನ್ನು ಗೂಟಕ್ಕೆ ಕಟ್ಟಿ ಬಿಡುವಳು. ಬೆಳಿಗ್ಗೆ ಯಥಾರೀತಿ ಆ ಹಸುವಿನ ಪೂಜೆ ಮಾಡಿ ಬಯಲಿಗೆ ಬಿಡುವರು. ಒಂದು ದಿನವಾದರೂ ಮಾಲೀಕರು ಅದಕ್ಕೆ ಮೇವು ಹಾಕಿರಲಿಲ್ಲ. ನೀರು ಕೊಟ್ಟಿರಲಿಲ್ಲ. ದಿನವೂ ಅದನ್ನು ಪೂಜಿಸಿ ಹಾಲು ಕರೆದು, ಕೈ ಬಿಟ್ಟು ಬಿಡುತ್ತಿದ್ದರು.

ಹನ್ನೆರಡೂ ತಿಂಗಳು ಹಸುವಿಗೆ ಹೊರಗೆ ಮೇವು ಎಲ್ಲಿ ಸಿಗಬೇಕು ? ಒಂದು ದಿನ ಹಸುವು ತಾಪ ತಾಳಲಾರದೆ ಅರಣ್ಯಕ್ಕೆ ಹೋಗಿ ಬರೋಣ ಎಂದು ಹೋಯಿತು. ಅಲ್ಲಿ ಗಿಡದಡಿ ಕುಳಿತು ಕಣ್ಣೀರು ಹಾಕುತ್ತಿತ್ತು. ಅಲ್ಲೇ ಇದ್ದ ಸಂತ ಕೇಳಿದ, "ಹಸುವೆ, ಅಳುತ್ತೀಯಲ್ಲ ಏಕೆ?" ಎಂದು.

"ಸಂತರೆ ಏನು ಹೇಳಲಿ ನನ್ನ ಕತೆಯನ್ನು? ನಾನು ಒಬ್ಬ ಧನಿಕರ ಮನೆಯಲ್ಲಿದ್ದು ಎಂಟು ತಿಂಗಳಾಯಿತು. ಮನೆಯವರು ನನ್ನಿಂದ ದಿನವೂ ಹಾಲು ಕರೆದುಕೊಂಡು ಹೋಗುತ್ತಾರೆ. ಇನ್ನುಳಿದ ಸಮಯ ನನ್ನ ಸನಿಹವೂ ಸುಳಿಯುವುದಿಲ್ಲ. ನನ್ನ ಹೊಟ್ಟೆ-ನೆತ್ತಿಯನ್ನು ಎಂದೂ ವಿಚಾರಿಸುವುದಿಲ್ಲ" ಎಂದು ಹಸುವು ತನ್ನ ಕತೆ-ವ್ಯಥೆ ಹೇಳಿಕೊಂಡಿತು.

"ಹಾಗಾದರೆ ಆ ಮನೆಯಲ್ಲಿ ನಿನ್ನ ನಿಜವಾದ ಹಿತೈಷಿಗಳು ಯಾರೂ ಇಲ್ಲವೆಂದಂತಾಯಿತು. ಮತ್ತೆ ನೀನೇಕೆ ಆ ಮನೆಯಲ್ಲಿ ಇಷ್ಟು ದಿನಗಳಿಂದ ಇರುವೆ?" ಎಂದ ಸಂತ.

"ನಾನೇನೋ ಆ ಮನೆಯನ್ನು ಬಿಡಬೇಕು ಎನ್ನುತ್ತೇನೆ. ಆದರೆ ಆ ಮನೆಯ ಯಜಮಾನಿ ದಿನಾಲೂ ಬೆಳಿಗ್ಗೆ ನನ್ನ ಪೂಜೆ ಮಾಡುತ್ತಾಳೆ. ವಿಭೂತಿ, ಕುಂಕುಮ ಹಚ್ಚಿ ಕೈ ಮುಗಿಯುತ್ತಾಳೆ. ಅದು ನನಗೆ ಬಹಳ ಹಿತವೆನಿಸುತ್ತದೆ. ಸಂತರೆ, ಆ ಮನೆಯನ್ನು ನಾನು ಹೇಗೆ ಬಿಡಲಿ?" ಎಂದಿತು ಆ ಸಾಧು ಹಸು. ಅನ್ನ-ನೀರಿಲ್ಲದ ಮನೆಯಲ್ಲೂ ಇರಬೇಕು ಎನ್ನಿಸಿತು ಹಸುವಿಗೆ. ಇದೆಂಥ ಬಂಧನ !

ನಿವೃತ್ತರಾದ ಮೇಲೆ ಸಾಹೇಬರು ಮನೆಯಲ್ಲಿ ಇರುತ್ತಾರೆ. ತಮ್ಮ ವಿಶೇಷ ಕೋಣೆಯಲ್ಲಿ ವಿಶ್ರಾಂತಿ ಪಡೆಯುತ್ತಾರೆ. ಮನೆಯ ತುಂಬ ಮಕ್ಕಳು, ಮೊಮ್ಮಕ್ಕಳು. ಜಾಗ ಸಾಲದಾಗುತ್ತದೆ. ಧರ್ಮಪತ್ನಿ ಹೇಳುತ್ತಾರೆ, "ಆ ಕೋಣೆಯಲ್ಲಿ ಈಗ ನಿಮ್ಮದೇನು ಕೆಲಸ? ಮಕ್ಕಳು-ಮೊಮ್ಮಕ್ಕಳು ಪರೀಕ್ಷೆಗೆ ಓದಿಕೊಳ್ಳಬೇಕಂತೆ ಒಂದಿಷ್ಟು ಹೊರಗೆ ಬಂದಿರಿ." ಈತ ಜೀವನ ತುಂಬ ಕಷ್ಟಪಟ್ಟು ಕಟ್ಟಿದ ಮನೆಯಲ್ಲೇ ಈತನಿಗೆ ವಿಶ್ರಮಿಸಲು ಸರಿಯಾದ ಜಾಗವಿಲ್ಲದಾಯಿತು. ಒಂದು ದಿನ ಮಠಕ್ಕೆ ಹೋದಾಗ ಗುರುಗಳು ಆತ್ಮೀಯತೆಯಿಂದ ಕೇಳಿದರು, "ಅಂಥ ಕಷ್ಟವಿರುವಾಗ ನಿವೃತ್ತಿಯಾದ ಮೇಲೆ ಮನೆಯಲ್ಲಿಯೇ ಇರಬೇಕೆಂದು ಏನಿದೆ? ಮಠಕ್ಕೆ ಬರಬಾರದೆ?"

ಸಾಹೇಬರು ಹೇಳಿದರು, "ಗುರುಗಳೇ ನಿಮಗೇನು ಗೊತ್ತು? ಮನೆಯ ಮೊದಲನೆಯ ಕೋಣೆಯಲ್ಲಿ ಮಕ್ಕಳು ನನ್ನದೊಂದು ದೊಡ್ಡ ಫೋಟೋ ಹಾಕಿದ್ದಾರೆ. ನನ್ನ ಸತಿಯು ದಿನವೂ ಬೆಳಿಗ್ಗೆ-ಸಂಜೆ ತಪ್ಪದೆ ಪೂಜೆ ಮಾಡಿ ಗಂಧದಕಡ್ಡಿ ಬೆಳಗಿ ಕೈ ಮುಗಿಯುತ್ತಾಳೆ. ಅದು ನೋಡಿದ ಕೂಡಲೆ ನನ್ನ ಕಷ್ಟವೆಲ್ಲಾ ಬಿಸಿಲಿಗೊಡ್ಡಿದ ಮಂಜಿನಂತೆ ಕರಗಿಹೋಗುತ್ತದೆ. ಗುರುಗಳೇ, ನೀವೇ ಹೇಳಿ ಆ ಮನೆ ನಾನು ಹೇಗೆ ಬಿಡುವುದು?" ಒಂದು ನಿಮಿಷದ ತನ್ನ ಪೂಜೆಯ ಸುಖಕ್ಕೆ ಮುದುಕ ಆಯುಷ್ಯದ ದುಃಖವನ್ನೇ ಸಹಿಸುತ್ತಾನೆ. ಅದಕ್ಕೆಂದೇ ಅಲ್ಲಮಪ್ರಭುದೇವರು ಹೇಳಿದರು, "ಸಾಸುವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡಾ!" ಎಂದು. ಸಂಸಾರವೆಂದರೆ ಹೀಗೆ ಬಿಡುವಷ್ಟು ಕಷ್ಟವಿಲ್ಲ, ಹಿಡಿಯುವಷ್ಟು ಸುಖವಿಲ್ಲ. ಅದೊಂದು ರೀತಿ ಪಗಡೆಯಾಟ ಇದ್ದಂತೆ.

ಇವತ್ತೇನೂ ಹಣವೇ ಸಿಗಲಿಲ್ಲ. ಆಟ ಬಿಟ್ಟು ಬಿಡೋಣ ಎನ್ನುವುದರಲ್ಲಿ ಹತ್ತು ರೂಪಾಯಿ ಸಿಗುತ್ತದೆ. ಏನೋ ಅದೃಷ್ಟ ಚೆನ್ನಾಗಿದೆ ನೋಡೋಣ ಎಂದು ಧೈರ್ಯದಿಂದ ಆಡುತ್ತಾನೆ. ಹತ್ತು ನೂರು ರೂಪಾಯಿ ಹೋಗುತ್ತವೆ. ಸಾಕು, ಇನ್ನೆಂದಿಗೂ ಈ ಆಟದ ಮನೆಗೇ ಬರುವುದಿಲ್ಲ ಎಂದುಕೊಳ್ಳುತ್ತಾನೆ. ಅಷ್ಟರಲ್ಲಿ ಐದುನೂರು ರೂಪಾಯಿ ಒಂದೇ ಸಲಕ್ಕೆ ಬಂದು ಬಿಡುತ್ತದೆ. ಅಪಾರ ಸಂತೋಷವಾಗುತ್ತದೆ. ಆಟ ಮುಂದುವರಿಸುತ್ತಾನೆ. ಐದು ನೂರು ರೂಪಾಯಿಗಳನ್ನು ಸೋತಿದ್ದನ್ನೇ ಮರೆಯುತ್ತಾನೆ.

ಲಾಟರಿಯೂ ಅಷ್ಟೇ. ಒಂದೇ ಅಂಕಿಯಲ್ಲಿ ಹೋಗಿದೆ ಎನ್ನುತ್ತಾರೆ. ಮತ್ತೆ ಮತ್ತೆ ಪ್ರಯತ್ನಿಸುತ್ತಾರೆ. ವಿಫಲರಾಗುತ್ತಾ ಹೋಗುತ್ತಾರೆ. ಲಾಟರಿಯು ಒಂದಂಕಿಯಲ್ಲಿ ಹೋದರೇನು? ಎರಡಂಕಿಯಲ್ಲಿ ಹೋದರೇನು? ಸೋತದ್ದು







ನಿಜವೆಂಬುದನ್ನು ಮರೆಯುತ್ತಾರೆ. ಜೀವನವೆಂದರೆ ಹೀಗೆ ಸೋಲನ್ನು ಮರೆಸುವ ಗೆಲುವು ದುಃಖವನ್ನು ತೋರಗೊಡದ ಸುಖದ ಮುಖವಾಡ.

ಕಾರ್ಮಿಕನು ದಿನವಿಡೀ ಬೆವರು ಸುರಿಸಿ ದುಡಿಯುತ್ತಾನೆ. ಸಂಜೆಯ ಹೊತ್ತು ಕೈಗೆ ನೂರಾರು ರೂಪಾಯಿ ಬರುತ್ತದೆ. ಮನೆಗೆ ಬರುವಾಗ ದಾರಿ ತಪ್ಪುತ್ತದೆ. ದುಡಿಮೆಯ ಕಷ್ಟವನ್ನು ಕಳೆಯುವುದೆಂದು ಎಲ್ಲಿಯೋ ಹೋಗಿ ಏನೋ ಕುಡಿದು ಬರುತ್ತಾನೆ. ದಾರಿಯಲ್ಲಿ ಆತನ ದುಡ್ಡು ಬೀಳುತ್ತದೆ. ಅದವನಿಗೆ ಗೊತ್ತಿಲ್ಲ. ಮನೆಯಲ್ಲಿ ಸತಿಯು ಸಂಬಳ ಕೇಳಿದಾಗ ಜೇಬಿನಲ್ಲಿ ಉಳಿದಿದ್ದ ನಾಲ್ಕು ಕಾಸು ಕೊಡುತ್ತಾನೆ. "ಇಷ್ಟೇ ದುಡ್ಡಿನಲ್ಲಿ ಮನೆ ಹೇಗೆ ನಡೆಯುತ್ತದೆ. ಮಕ್ಕಳು ಮರಿಯೊಂದಿಗೆ ನಾವೆಲ್ಲ ಉಪವಾಸ ಬೀಳಬೇಕಾಗುತ್ತದೆ" ಎನ್ನುತ್ತಾಳೆ ಸತಿ. ಅದೊಂದು ಈತನಿಗೆ ಕೇಳಿಸುವುದಿಲ್ಲ. ಏನೋ ಆನಂದ, ಎಂಥದೋ ಅಮಲಿನಲ್ಲಿ ಅವನಿರುತ್ತಾನೆ. ಕುಡಿತದಿಂದ ಮನೆಯವರೆಲ್ಲರೂ ನರಕಯಾತನೆ ಅನುಭವಿಸುತ್ತಿದ್ದಾರೆ. ಆದರೂ ಈತ ಕುಡಿಯುವುದು ಬಿಡುವುದಿಲ್ಲವಲ್ಲ ಇದೆಂಥ ಬಂಧನ ?

ಪ್ರಪಂಚದ ಸ್ವರೂಪವೇ ಹಾಗೇ. ಅದು ತನ್ನ ಸುಖದ ಮುಖವನ್ನಷ್ಟೇ ತೋರುತ್ತದೆ. ಹೀಗಾಗಿ ಪ್ರಪಂಚದ ಬಂಧನ ಕಳೆದುಕೊಳ್ಳಬೇಕು ಎನ್ನಿಸುವುದಿಲ್ಲ. ಸಿನಿಮಾ, ಟಿ.ವಿ. ನೋಡಿದ ತರುಣರು ತಾವೂ ಜೀವನದಲ್ಲಿ ಅವರಂತೆ ಕುಣಿಯಲು ಹೋಗಿ ಎಡವುತ್ತಾರೆ. ಅದು ನೈಜಕುಣಿತವಲ್ಲ ಎಂಬುದು ಮರೆಯುತ್ತಾರೆ.

ದೊಡ್ಡಮನೆ, ಧನಿಕ ದಂಪತಿಗಳು, ಆದರೆ ಅವರಲ್ಲಿ ದಿನವೂ ಜಗಳ, ಹೊರಗೆ ಬರುವಾಗ ಮಾತ್ರ ಹೊಸಬಟ್ಟೆ, ನಗೆಮೊಗ, ನೋಡಿದವರು – 'ಎಂಥಾ ಸಮೃದ್ಧದ ಬದುಕು! ಏನು ಸಮರಸಜೀವನ!' ಎಂದುಕೊಳ್ಳುತ್ತಾರೆ. ತಾವೂ ದೊಡ್ಡ ಮನೆಗೆ ದುಡ್ಡು ಮಾಡಬೇಕೆಂದು ಕನಸು ಕಾಣುತ್ತಾರೆ. ಆ ಧನಿಕ ದಂಪತಿಗಳ ಬಹಿರಂಗದ ಬದುಕು ನಿಜವೆಂದುಕೊಳ್ಳುತ್ತಾರೆ.

ಶಿವಪಾರ್ವತಿಯರ ಸಂಸಾರವನ್ನು ಒಬ್ಬ ಕವಿ ಸೊಗಸಾಗಿ ವರ್ಣಿಸುತ್ತಾನೆ. ಶಿವನ ಮುಡಿಯಲ್ಲಿ ಗಂಗೆ, ತೊಡೆಯ ಮೇಲೆ ಪಾರ್ವತಿ. ಒಂದು ದಿನ ಶಿವನಿಗೆ ಬೇಸರವಾಗಿ "ಪಾರ್ವತಿದೇವಿ ಒಂದಿಷ್ಟು ಕೆಳಗಿಳಿ, ಹೊರಗೆ ತಿರುಗಾಡಿಕೊಂಡು ಬರುತ್ತೇನೆ" ಎಂದನಂತೆ.

ತಕ್ಷಣವೇ ರೇಗಿದ ಪಾರ್ವತಿ ಹೇಳಿದಳು – "ಶಿವನೇ, ನಿಮ್ಮಲ್ಲಿ ಏನಾದರೂ ನ್ಯಾಯ, ನೀತಿ, ಧರ್ಮ ಇದೆಯಾ?" ಎಂದಳಂತೆ. ಗಾಬರಿಯಾದ ಶಿವ "ಏನಾಯಿತು ನನ್ನಿಂದ ಅಂಥ ಅಧರ್ಮಕಾರ್ಯ?" ಎಂದನಂತೆ. "ಇನ್ನೇನಾಗ ಬೇಕು?" ಮುಡಿಯ ಮೇಲಿನವರನ್ನು ಮೊದಲಿಳಿಸಿರಿ. ಆಮೇಲೆ ನಾನು ಇಳಿಯದಿದ್ದರೆ ಕೇಳಿರಿ" ಎಂದಳಂತೆ ಪಾರ್ವತಿ.

ಮನುಷ್ಯನ ಮೋಹದ, ಮರೆವಿನ ಕಣ್ಣಿಗೆ ಈ ಪ್ರಪಂಚದ ಸುಖದ ಚಿತ್ರ ಮಾತ್ರ ಕಾಣುತ್ತದೆ. ಅದರ ಹಿಂದಿರುವ ಅಪಾರವಾದ ದುಃಖವು ನಮಗೆ ಕಾಣದೇ ಉಳಿಯುತ್ತದೆ. ಅರಿವಿನ ಕಣ್ಣಿನಿಂದ ನೋಡಿದರೆ ಸಂಸಾರದ ನಿಜಸ್ವರೂಪ ತಿಳಿಯುತ್ತದೆ. ಬಂಧನವಳಿಯುತ್ತದೆ. ಆದರೆ ಅರಿವಿನ ಕಣ್ಣನ್ನು ಕೊಡುವ ಗುರುವನ್ನೇ ಮರೆತು ಮನುಷ್ಯ ವಿಷಮ ಸಂಸಾರದ ಹಿಂದೆ ಧಾವಿಸುತ್ತಾನೆ, ದುಃಖಿಸುತ್ತಾನೆ.

ಅಂತೆಯೇ ಶರಣರು ಎಚ್ಚರಿಸಿದರು. 'ಕನಕ–ಕಾಮಿನಿಗಾಗಿ ಹೊಡೆದಾಡಿ ಕೆಟ್ಟಿತೀ ಲೋಕವೆಲ್ಲ. ಇದ ಕಂಡು ಕೇಳಿ ಮತ್ತೆ ಮೋಹಿಪರೆ ಹುಚ್ಚು ಮನವೇ?' ಈ ಮನದ ಮರುಳತನ ಬಿಟ್ಟಾಗ ಮನುಷ್ಯನು ಅನಾರೆಂದು ಅರಿಯುತ್ತಾನೆ. ಸಕಲಬಂಧನಗಳನ್ನು ಕಳೆದುಕೊಂಡು ನಿಜಸುಖವನ್ನು ಪಡೆಯುತ್ತಾನೆ.

ಮಾನವನ ಮನದ ಈ ಮರುಳತನವನ್ನು, ಕತ್ತಲೆಯನ್ನು ಕಳೆಯುವುದಕ್ಕಾಗಿ ತೈತ್ತರೀಯ ಉಪನಿಷತ್ತಿನಲ್ಲಿ ಒಂದು ಸರಳತನಪೋಮಾರ್ಗವನ್ನು ತೋರಿದ್ದಾರೆ. 'ಋತಂಚ ಸ್ವಾಧ್ಯಾಯ ಪ್ರವಚನೇಚ, ದಮಶ್ಚ, ಶಮಶ್ಚ, ಅತಿಥಯಶ್ಚ, ಅಗ್ನಯಶ್ಚ ಸ್ವಾಧ್ಯಾಯ ಪ್ರವಚನೇಚ ತದ್ದ ಹೀ ತಪಃ'

ತಪಸ್ಸು ಎಂದರೆ ನಾವು ತಿಳಿದಂತೆ ಅನ್ನಪಾನಾದಿ ಗಳನ್ನು ಬಿಡುವುದಲ್ಲ, ಪ್ರಪಂಚವನ್ನು ತೊರೆದು ಗುಡ್ಡ ಬೆಟ್ಟಗಳನ್ನು ಸೇರುವುದಲ್ಲ, ಕಠೋರ ವ್ರತಾಚರಣೆಗಳನ್ನು ಮಾಡಿ ತನು–ಮನಗಳನ್ನು ದಂಡಿಸುವುದೂ ಅಲ್ಲ, ಇವೆಲ್ಲವುಗಳಿಗೂ ಮೇಲಾದ ತಪವೊಂದಿಲ್ಲಿದೆ.

ನೀನು ಸತ್ಯವನ್ನು ನುಡಿ, ಅತಿಥಿಗಳನ್ನು ಸೇವಿಸು. ಮನೋನಿಗ್ರಹ ಮಾಡು. ಇಂದ್ರಿಯನಿಗ್ರಹ ಮಾಡು. ಏನಾದರೂ ಮಾಡು, ಆದರೆ ಒಂದನ್ನು ಮಾಡಲು ಮರೆಯದಿರು – 'ಸ್ವಾಧ್ಯಾಯ–ಪ್ರವಚನ'ಗಳನ್ನು ಆಚರಿಸು. ಅದು ಎಲ್ಲ ತಪಗಳ ತಪ, ಪರಮತಪ.

ಜಗತ್ತಿನ ಶ್ರೇಷ್ಠ ಸಂತರು, ಜ್ಞಾನಿಗಳು, ಅನುಭಾವಿಗಳು ತಾವು ಕಂಡುಂಡ ಸತ್ಯದ ಬೆಳಕನ್ನು ತಮ್ಮ ನುಡಿಗಳಲ್ಲಿ ಹಿಡಿದಿಟ್ಟಿದ್ದಾರೆ. ಅವರ ಮಾತು ಮಾತಲ್ಲ, ಮಂತ್ರ, ಜ್ಯೋತಿರ್ಲಿಂಗ! ಅವರ ಉಪದೇಶದ ಹೊತ್ತಿಗೆಗಳನ್ನು ಕೈಗೆತ್ತಿಗೊಳ್ಳಬೇಕು. ಅಲ್ಲಿಯ ನುಡಿಗಡಣದ ಮೇಲೆ ನಮ್ಮ ಅಂತ ರಂಗದಲ್ಲಿ ಚಿಂತನ–ಮಂಥನ ನಡೆಯಬೇಕು. ಆಗ ಆತ್ಮಾನುಭಾವದ ಪಥದರ್ಶನವಾಗುತ್ತದೆ. ಅದು ಸ್ವಾಧ್ಯಾಯತಪ.

ಒಂದು ವೇಳೆ ಅಂಥ ಸಂತ–ಮಹಂತರ ಸಾನ್ನಿಧ್ಯವೇ ದೊರೆತರೆ ನಮ್ಮ ಭಾಗ್ಯಕ್ಕೆ ಎಣೆಯಿಲ್ಲ. ನಮ್ಮ ಸಾಧನೆ ಇನ್ನಷ್ಟು ಸುಲಭವಾಗುತ್ತದೆ. ಅವರ ಮುಖದಿಂದ ಆತ್ಮೋಪ ದೇಶವನ್ನು ಕೇಳುತ್ತ ನಾವು ಮಗ್ನರಾಗುತ್ತೇವೆ. ಆಗ ನಮ್ಮ ಅಜ್ಞಾನದ ಕತ್ತಲೆಯು ಕಳೆದುಹೋಗುತ್ತದೆ. ತಕ್ಷಣವೇ

ಅಂತರಂಗದಲ್ಲಿ ಅನಾರೆಂಬ ಅರಿವಿನ ಜ್ಯೋತಿ ಬೆಳಗತೊಡಗುತ್ತದೆ. ರಾಗಾದಿ ಭಾವಬಂಧನಗಳೆಲ್ಲ ಅಳಿದು ಹೋಗಿ ನಾವು ವಿಮುಕ್ತರಾಗುತ್ತೇವೆ. ಅದು ಪರಮತಪ.

ಬಲ್ಲವರ ನುಡಿಗಳನ್ನು ಕೇಳುವುದು, ಹೇಳುವುದೇ ಪರಮತಪ. ಈ ಸತ್ಸಂಗದಲ್ಲಿ ನಾವು ನಮ್ಮ ಜಾತಿ–ಮತ, ಸ್ಥಾನ–ಮಾನ, ಘನತೆ–ಗೌರವಗಳನ್ನೆಲ್ಲ ಮರೆಯುತ್ತೇವೆ. ಅವರ ಅಮರವಾಣಿಯಲ್ಲಿ ಬೆರೆಯುತ್ತೇವೆ. ಆಗ ನಮ್ಮ ಹೃದಯದಲ್ಲಿ ಭವ್ಯಬೆಳಗಿನ ಸುಮಧುರಕಿರಣಗಳು ಪ್ರವೇಶಿಸುತ್ತವೆ. ನಮ್ಮ ಮನಸ್ಸು ಸಹಜವಾಗಿ ಸ್ವಸ್ವರೂಪದಲ್ಲಿ ಸ್ವಸ್ಥವಾಗಿ ಬಿಡುತ್ತದೆ. ಅವಿರಳಾನಂದ ಸಮನಿಸುತ್ತದೆ. ಅದೇ ಶ್ರವಣಾಖ್ಯ ಸಮಾಧಿ! ಆತ್ಮಸಿದ್ಧಿ!!

ಸಾಮಾನ್ಯವಾಗಿ, ಏಕಾಂತದಲ್ಲಿ ನಮ್ಮ ಸಾಧನೆಗೆ ಈ ಬಲ ಬರುವುದಿಲ್ಲ. ಚಿತ್ತ ಚಂಚಲವಾಗುತ್ತದೆ. ದೇಹಾಲಸ್ಯ ಉಂಟಾಗುತ್ತದೆ. ನಿದ್ರೆ ಸೂಸಿ ಬರುತ್ತದೆ. ತನು–ಮನಗಳಲ್ಲಿ ಕತ್ತಲೆ ಕವಿದುಬಿಡುತ್ತದೆ. ಆದರೆ ಸಂತರ ಸಾನ್ನಿಧ್ಯದಲ್ಲಿ ಮನಸ್ಸು ನಿರಾಯಾಸವಾಗಿ ಏಕಾಗ್ರತೆ ಪಡೆಯುತ್ತದೆ. ಆತ್ಮನ ಅವಿರಳ ಬೆಳಕು ಕಾಣುತ್ತದೆ.

ಈ ಪ್ರವಚನದ ಪರಮತಪವು ನಮ್ಮ ಅಂತರಂಗದಲ್ಲಿರುವ ಅಜ್ಞಾನದ ಕತ್ತಲೆಯನ್ನು ಚದುರಿಸಿ ಬಿಡುತ್ತದೆ. ಆಗ ಈ ಅಜ್ಞಾನದ ಭೂಮಿಯ ಮೇಲೆ ನಿಂತಿದ್ದ ಸಂಸಾರದ ವೃಕ್ಷವು ಉರುಳಿ ಬೀಳುತ್ತದೆ. ಸಕಲಬಂಧನಗಳು ಅಳಿದು ಹೋಗುತ್ತವೆ. ಅದೇ ಜೀವನ್ಮುಕ್ತಿ.

ಅಂತೆಯೇ ಶರಣರು ನಾಡಿನ ಮೂಲೆ ಮೂಲೆಗಳಿಂದ ಕಲ್ಯಾಣಕ್ಕೆ ಬಂದರು. ಶರಣರ ಅನುಭಾವ ಗೋಷ್ಠಿಯಲ್ಲಿ ಪಾಲ್ಗೊಂಡರು. ದಿನವಿಡೀ ಸತ್ಯಶುದ್ಧ ಕಾಯಕ ಮಾಡಿದರು. ಸಂಜೆಗೆ ಸತ್ಸಂಗ ಸತ್ಯ ಶ್ರವಣ ಸಾಧಿಸಿದರು. ಅದರ ಪರಿಣಾಮ ಎಂಥದ್ದು? ಸಾಮಾನ್ಯರೆಲ್ಲ ಅಸಾಮಾನ್ಯ ಅನುಭಾವಿಗಳಾಗಿದ್ದರು. ತುರುಗಾಹಿ ರಾಮಣ್ಣ, ಇಳಿಹಾಳ ಬೊಮ್ಮಯ್ಯನಂಥವರೂ ಆತ್ಮಸಿದ್ಧಿಯನ್ನು ಪಡೆದಿದ್ದರು. ಅವರೆಲ್ಲ ಈ ಪರಮತಪದ ಅಮೃತಫಲಗಳು. ಅನುಭವ ಮಂಟಪದಲ್ಲಿ ಅರಳಿದ ಅಮರಚೇತನರು.

ಆ ಶಿವಾನುಭವ ಮಂಟಪದಲ್ಲಿ ಅಲ್ಲಮಪ್ರಭುದೇವ, ಬಸವಣ್ಣ, ಚೆನ್ನಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ ಮೊದಲಾದ ಅನುಭಾವಿಗಳು ವಚನ–ಪ್ರವಚನದ ಪರಮ ತಪವನಾಚರಿಸಿದರು. ಅಂತೆಯೇ ಅಲ್ಲಿ ಭಕ್ತಿರಸ ಉಕ್ಕಿತು, ಜ್ಞಾನವರ್ಷವೇ ಕರೆಯಿತು, ಅನುಭಾವಸಾಗರದ ಮೇಲೆ ಪರಮಾನಂದದ ತೆರೆಗಳಾಡಿದುವು. ಈ ಅನುಭಾವ ಸಾಗರ ದಲ್ಲಿ ಮಿಂದು ಹೊರಬಂದವರೆಲ್ಲ ಅನಾರೆಂಬುದನರಿತು ರಾಗಾದಿ ಸಕಲಬಂಧನಗಳನ್ನು ಕಳೆದುಕೊಂಡು ಜೀವನ್ಮುಕ್ತರಾಗಿದ್ದರು.

**(ಕೃಪೆ: ನಾನಾರು?)**

## ಬಸವಣ್ಣನೆಂಬ ಜ್ಯೋತಿ



ವಿಶ್ವದ ಕತ್ತಲೆಗೆ ಜ್ಞಾನದ ಸೊಡರು
ಮಾನವತ್ವವು ನನ್ನೊಳಗೂ ನಿನ್ನೊಳಗೂ
ಹರಿದ ಸುಪ್ತದಾಚೆಯ ಅರಿವು.
ಕಾಯಕದ ಉಸಿರೇ..!
ಅಹಂಕಾರ ಕಳೆದ ವಿನೀತ ಭಾವದ ಮೇರು.
ಅಂಗವೆಲ್ಲಾ ಲಿಂಗಮಯವಾಗಿ
ತನು–ಮನ ಭಾವಗಳಪ್ಪಿ
ಗುಡಿ ಗೋಪುರದ ಕಳಸಗಳುರುಳಿ
ತನುವೇ ದೇವಾಲಯವಾಗಿ ಜ್ಞಾನವೇ ಪ್ರಭೆಯಾಗಿ
ಒಳ ಹೊರಗೆಲ್ಲಾ ಬೆಳಕೇ ನಿಂತು
ಉಸಿರು ನಿರಾಳ ಧರ್ಮ ಸಾಕಾರ
ಜ್ಞಾನ ಅಗುಳಿನ ದಾಸೋಹ
ಸಮಾನತೆಯ ವಿಸ್ತಾರ
ಮಹಾ ಮನೆಯ ಔನ್ನತ್ಯ.
ಕಾಯ ಭಾವದ ಸ್ಥೂಲವೇ..! ಸೂಕ್ಷ್ಮವೇ..!
ಸ್ಥೂಲ–ಸೂಕ್ಷ್ಮಗಳಾಚೆಯ ಶೂನ್ಯವೇ..!
ಬಿಂದುವೇ– ನಾದವೇ..!
ಬಿಂದು–ನಾದಗಳಾಚೆಯ ಚೈತನ್ಯವೇ..!
ದೇಹವೇ..! ದೇಗುಲವೇ..!
ದೇಹ–ದೇಗುಲಗಳಾಚೆಯ ಬಯಲೇ..!
ಬಯಲು, ಆಲಯ, ದೇಹ
ಕುರುಹು–ರೂಹುಗಳಾಚೆಯ ಬೆಳಕೇ..!
ಯುಗ ಯುಗದ ಕತ್ತಲೆಗೆ
ಅಗಮ್ಯ, ಅಗೋಚರ ಮಹಾನ್ ಕಾಂತಿ
ಬಸವ ಚೈತನ್ಯವು.

**ಸುಶೀಲಾ ಸದಾಶಿವಯ್ಯ**
ಲೇಖಕಿ, ಕವಯಿತ್ರಿ, ತುಮಕೂರು







ಲೇಖನ

# ಮಾತೆಂಬುದು ಜ್ಯೋತಿರ್ಲಿಂಗ

– ಆರ್.ಎಸ್. ಚಾಪಗಾವಿ *

**ಮಾತೆಂಬುದು ಜ್ಯೋತಿರ್ಲಿಂಗ, ಸ್ವರವೆಂಬುದು ಪರತತ್ತ್ವ**
**ತಾಳೋಷ್ಠ ಸಂಪುಟವೆಂಬುದು ನಾದಬಿಂದುಕಳಾತೀತ**
**ಗುಹೇಶ್ವರನ ಶರಣರು ನುಡಿದು ಸೂತಕಿಗಳಲ್ಲ ಕೇಳಾ ಮರುಳೆ.**

ಜಗತ್ತಿನಲ್ಲಿ ಮನುಷ್ಯ ಜೀವಿಗೆ ಮಾತ್ರ ಮಾತನಾಡುವ ಶಕ್ತಿ ಇದೆ. ಇದು ದೇವರು ಮಾನವನಿಗೆ ಕೊಟ್ಟ ವರದಾನವಾಗಿದೆ. ಮಾತು ಮಾನವನ ಮೊದಲ ಸಂಪರ್ಕ ಸಾಧನವಾಗಿದೆ. ಮಾನವನ ನಿತ್ಯ ಜೀವನದಲ್ಲಿ ಮಾತು ಬಹುದೊಡ್ಡ ಪಾತ್ರವಹಿಸುತ್ತದೆ. ಮಾನವನು ಓರ್ವ ಸಂಘ ಜೀವಿಯಾಗಿದ್ದು, ತನ್ನ ಅನುಭವ ಅನಿಸಿಕೆಗಳನ್ನು ಹಂಚಿಕೊಳ್ಳುವುದು, ತನ್ನ ಬೇಕು ಬೇಡಗಳನ್ನು ವ್ಯಕ್ತಪಡಿಸುವುದು ಮಾತಿನ ಮೂಲಕವೇ. ಯಾವ ಜೀವಿಗೂ ಇರದ ಈ ವಿಶೇಷ ಶಕ್ತಿಯು ದೇವರು ನಮಗೆ ಕೊಟ್ಟ ಅದ್ಭುತ ಕೊಡುಗೆಯಾಗಿದೆ. ಸಪ್ತಸ್ವರ ಭಾವನ್ನಕ್ಷರಗಳನ್ನೊಳಗೊಂಡ ಮಾತನ್ನು ನಾವು ದಕ್ಷತೆಯಿಂದ ಬಳಸಿಕೊಂಡು ನಮ್ಮ ಜೀವನವನ್ನು ಸುಖಮಯಗೊಳಿಸಿಕೊಳ್ಳಬೇಕು. ಅದಕ್ಕೆ ಅಲ್ಲಮಪ್ರಭು **'ಮಾತೆಂಬುದು ಜ್ಯೋತಿರ್ಲಿಂಗ'** ಎಂದಿದ್ದಾರೆ. ಜ್ಯೋತಿರ್ಲಿಂಗ ಸ್ವರೂಪವಾದ ಮಾತನ್ನು ಸಮರ್ಥವಾಗಿ ಬಳಸಿಕೊಂಡು ಬಸವಾದಿ ಶರಣರು ಸಾರ್ಥಕ ಜೀವನ ನಡೆಸಿದರು. ಅವರ ಮಾತೆಲ್ಲ ಮಂತ್ರಗಳಾದವು. ಅವರ ಹಿತನುಡಿಗಳೆ ವಚನಗಳಾದವು.

**ಮಾತಿನಿಂ ನಗೆ ನುಡಿಯು, ಮಾತಿನಿಂ ಹಗೆ ಕೊಲೆಯು**
**ಮಾತಿನಿಂ ಸರ್ವ ಸಂಪದವು ಲೋಕಕ್ಕೆ**
**ಮಾತೆ ಮಾಣಿಕವು ಸರ್ವಜ್ಞ**

ಮಾತಿನಿಂದ ನಗೆಯನ್ನು ಹರಿಸಬಹುದು, ಮಾತಿನಿಂದ ಹಗೆಯನ್ನು ಸಾಧಿಸಬಹುದು, ಮಾತಿನಿಂದ ಸಕಲ ಸಂಪತ್ತನ್ನು ಸಾಧಿಸಬಹುದು. ಜವಾಬ್ದಾರಿಯಿಂದ ಮಾತನ್ನು ಬಳಸಬೇಕೆಂಬ ಹಿತನುಡಿಯನ್ನು ಸರ್ವಜ್ಞ ಹೇಳಿರುವನು. ಮಾತು ಕುರಿತು ನಮ್ಮ ಜನಪದ ಲೋಕದಲ್ಲಿ ಸಾಕಷ್ಟು ಚಿಂತನೆ ಇರುವುದನ್ನು ಕಾಣುತ್ತೇವೆ. 'ಮಾತೇ ಮುತ್ತು, ಜಾಣ ಮಾತೇ ಕೇಡಿನ ತಾಣ', 'ಮಾತು ಬಲ್ಲವ ಮಾಣಿಕ್ಯ ತಂದ, ಮಾತರಿಯದವ ಜಗಳ ತಂದ', 'ಮಾತು ಮನೆ ಕೆಡಿಸಿತು, ತೂತು ಒಲೆ ಕೆಡಿಸಿತು', 'ಮಾತು ಆಡಿದರೆ ಹೋಯಿತು, ಮುತ್ತು ಒಡದರೆ ಹೋಯಿತು', 'ಆಡಿದ ಮಾತು, ಬಿಟ್ಟ ಬಾಣ ಹಿಂತಿರುಗಿ ಬರಲಾರವು', 'ಮಾತಿನಂತೆ ನಡೆವವನು ತುಂಬಿದ ಕೊಡದ ಹಾಗೆ, ನಡೆಯದವನು ಅರಗೊಡ', 'ಮಾತು ಬಲ್ಲವ ಬರಗಾಲಲ್ಲೂ ಬದುಕಬಲ್ಲ', 'ನುಡಿದಂತೆ ನಡೆ ಇದೇ ಜನ್ಮಕಡೆ' ಹೀಗೆ ಮಾತಿನ ಬಗ್ಗೆ ನೂರಾರು ಉಕ್ತಿಗಳು, ನಾನ್ನುಡಿಗಳು, ಜಾನ್ನುಡಿಗಳು ಇರುವವು. ಒಳ್ಳೆಯ ನುಡಿ ನಡೆಗಳು ನಮ್ಮ ಬಾಳಿಗೆ ಭೂಷಣವಾಗಿರುವವು. ನಮ್ಮ ಬಾಳಿಗೆ ದಾರಿದೀಪಗಳಾಗಿರುವವು.

ಮನುಷ್ಯನ ವ್ಯಕ್ತಿತ್ವ ಪ್ರಕಟವಾಗುವುದು ಆತನ ವ್ಯಕ್ತಿತ್ವ ಉಜ್ವಲವಾಗುವುದು; ಆತನ ನಡೆ ನುಡಿಗಳಿಂದ. ಮಾತು ಮುತ್ತಾಗಬೇಕು, ಮೃತ್ಯುವಾಗಬಾರದು. ಮಾತಿನಲ್ಲಿ ತೂಕವಿರಬೇಕು, ಮಾತಿನಲ್ಲಿ ಹಿಡಿತವಿರಬೇಕು, ಮಾತಿನಲ್ಲಿ ಸತ್ಯವಿರಬೇಕು, ಅರ್ಥ ಇರಬೇಕು, ಸತ್ವ ಇರಬೇಕು, ಪ್ರೀತಿ ಇರಬೇಕು, ಮಾತಿನಲ್ಲಿ ಶಾಂತಿ, ಸಹನೆ, ಸೈರಣೆ, ಸಮಾಧಾನ ಇರಬೇಕು. ಸಹಚಿಂತನ ಇರಬೇಕು. ಅಂತಹ ನಲ್ನುಡಿಗಳ ಸೂಳ್ನುಡಿಗಳ ಮಂಥನವೇ ಸತ್ಸಂಗವೆನಿಸುವುದು. ಮಾತಿನಲ್ಲಿ ತುಸುವೇ ಶಿಥಿಲತೆ ಉಂಟಾದರೂ ಚಾರಿತ್ರ್ಯ ಹಾಳಾಗುತ್ತದೆ. ಆದ್ದರಿಂದ ಮಾತಾಡುವಾಗ ತುಂಬ ಜಾಗರೂಕರಾಗಿರಬೇಕು.

**ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ**
**ರಸಿಕನಲ್ಲದನ ಬರಿಮಾತು ಕಿವಿಗೆ**
**ಕೂರ್ದಸಿಯ ಬಡಿದಂತೆ ಸರ್ವಜ್ಞ**

ರಸಿಕರ, ಸಜ್ಜನರ ಸವಿಮಾತುಗಳು ಬೆಳದಿಂಗುಳಿನಂತೆ ಆಹ್ಲಾದಕರವಾಗಿರುತ್ತವೆ. ದುಷ್ಟರ ಕೆಟ್ಟ ನುಡಿಗಳು, ಕಿವಿಗೆ ಚೂಪಾದ ಗೂಟಬಡಿದಂತೆ, ಕರ್ಕಶವಾಗಿರುತ್ತವೆ ಎಂದು ಸರ್ವಜ್ಞ ಕವಿ ಹೇಳಿದ್ದಾನೆ. ಮಾತಿನ ಪೆಟ್ಟು, ಲತ್ತೆಯ ಪೆಟ್ಟಿಗಿಂತ ಕೆಟ್ಟದಾಗಿರುತ್ತದೆ.

* # ೭೪೪, ರಾಮತೀರ್ಥನಗರ, ಬೆಳಗಾವಿ







ಶರಣರ, ಸಹೃದಯರ, ಸಂತರ, ಮಹಂತರ ಅನುಭಾವದ ರಸಮಯ ಮಾತುಗಳು, ಕಿವಿಗೆ ಇಂಪು, ಮನಕ್ಕೆ ತಂಪು ನೀಡುತ್ತವೆ. ಸಿದ್ಧಗಂಗಾ ಮಠದ ಪರಮಪೂಜ್ಯ ಲಿಂ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು, ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಸ್ವಾಮಿಗಳು, ಗದುಗಿನ ತೋಂಟದಾರ್ಯ ಮಠದ ಲಿಂ. ಡಾ. ಸಿದ್ಧಲಿಂಗ ಸ್ವಾಮಿಗಳಂತವರ ಸಿರಿಕಂಠದಿಂದ ಬಂದ ನುಡಿಮುತ್ತುಗಳು ಅಮೃತ ಸಿಂಚನವಾದಂತಿದ್ದು; ಎಷ್ಟು ಹೊತ್ತು ಕೇಳಿದರೂ ಇನ್ನೂ ಕೇಳುತ್ತಲೇ ಇರಬೇಕೆನಿಸುತ್ತದೆ. ಇನ್ನೂ ಕೇವಲ ಬಾಯಿ ಚಪಲಕ್ಕೆ ಮಾತನಾಡುವವರೂ ಕೆಲವರಿರುತ್ತಾರೆ. ಪಾಂಡಿತ್ಯ ಪ್ರದರ್ಶನಕ್ಕೆ ಮಾತನಾಡುವವರೂ ಹಲವರಿರುತ್ತಾರೆ. ಇಂಥವರನ್ನು ಕಂಡ ಅಕ್ಕಮಹಾದೇವಿ 'ಮಾತಿನ ಬಣವೆಯ ಮಿಟ್ಟೆಯ ಭಂಡಾರ ತೋರದಿರಯ್ಯಾ' ಎಂದು ತನ್ನೊಂದು ವಚನದಲ್ಲಿ ಹೇಳಿಕೊಂಡಿದ್ದಾಳೆ.

**ನುಡಿದರೆ ಮುತ್ತಿನ ಹಾರದಂತಿರಬೇಕು.**
**ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು.**
**ಮೃದು ವಚನವೆ ಸಕಲ ಜಪಂಗಳಯ್ಯಾ.**
**ಮೃದು ವಚನವೆ ಸಕಲ ತಪಂಗಳಯ್ಯಾ.**
**ಏನಿ ಬಂದಿರೆ ಹದುಳಿದ್ದಿರೆ ಎಂದರೆ,**
**ನಿಮ್ಮ ಐಸಿರಿ ಹಾರಿ ಹೋಹುದೆ ?**

ಮಾತಾಡುವ ಮಾತುಗಳು ಮುತ್ತಿನ ಹಾರದಂತೆ ಸುಂದರವಾಗಿರಬೇಕು, ಮಾಣಿಕ್ಯದ ದೀಪ್ತಿಯಂತೆ ಸ್ಪಷ್ಟವಿರಬೇಕು, ಸ್ಫಟಿಕದಂತೆ ಪಾರದರ್ಶಕವಿರಬೇಕು, ಮೃದು ವಚನಗಳೇ ಸಕಲ ಜಪಂಗಳು, ಸಕಲ ತಪಂಗಳು ಅಂಥ ಮಾತುಗಳಲ್ಲಿ ಅಗಾಧ ಶಕ್ತಿಯಿರುತ್ತದೆ. ಅಂಥ ಮಾತುಗಳು ಎಲ್ಲ ಕಡೆಗೂ ಸಲ್ಲುತ್ತವೆ. ಬಂದಿರಾ, ಬನ್ನಿ ಕುಶಲವಾಗಿದ್ದೀರಾ? ಎಂದು ವಿಚಾರಿಸಿದರೆ ನಮ್ಮ ಗಂಟೇನು ಹೋಗುವುದಿಲ್ಲ. ಆದರೆ ಶಿವನು ಅಂಥ ನುಡಿಗಳನ್ನು ತುಂಬ ಮೆಚ್ಚಿಕೊಳ್ಳುತ್ತಾನೆ ಎಂದು ಬಸವಣ್ಣನವರು ಹೇಳುತ್ತಾರೆ. ಕೂಡಲಸಂಗನ ಶರಣರ ಬಾಯಿಂದ ಬರುವ ಇಂಥ ನಲ್ನುಡಿಗಳು ಹಾಲ ತೊರೆಗೆ ಬೆಲ್ಲದ ಕೆಸರು, ಸಕ್ಕರೆಯ ಮಳಲು ರುಚಿಕರವಾದ ನೊರೆಯಿದ್ದಂತೆ ಎಂದು ಉಪಮಿಸಿ ನುಡಿದಿದ್ದಾರೆ. 'ಶರಣರ ಸೂಳ್ನುಡಿಯ ಒಂದರಗಳಿಗೆ ಇತ್ತಡೆ ನಿಮ್ಮನೇ ಇತ್ತೆ' ಎಂದು ಜೇಡರ ದಾಸಿಮಯ್ಯ ಹೇಳಿದರೆ, 'ಗೀತ ಮಾತೆಂಬ ಜ್ಯೋತಿಯ ಬೆಳಗಿಕೊಟ್ಟರು ಕೂಡಲ ಚೆನ್ನಸಂಗನ ಶರಣರು' ಎಂದು ಚೆನ್ನಬಸವಣ್ಣನವರು ಹೇಳಿದ್ದಾರೆ.

ಮಾತಿನ ಮಹತ್ವ ಕುರಿತು ಶರಣರು ತುಂಬ ಚಿಂತನೆ ಮಾಡಿದ್ದಾರೆ. ಮಾತು ಬಲ್ಲಾತಂಗೆ ಮಥನದ ಹಂಗೇಕೆ? ಎಂದು ಕೇಳಿದ ಹಡಪದ ಅಪ್ಪಣ್ಣನವರು ಚೆನ್ನಾಗಿ ಮಾತು ಬಲ್ಲವನ ಸಮೀಪ ಘರ್ಷಣೆ, ಜಗಳ, ಕಲಹ ಸುಳಿಯಲಾರವು ಎಂದು ಹೇಳಿದ್ದಾರೆ. 'ನುಡಿದ ನುಡಿಯೆಲ್ಲವು ಮಹಾಪ್ರಸಂಗ ವಾದ ಮತ್ತೆ ಲೆಕ್ಕವಿಲ್ಲದ ವೇದ ಸಂಖ್ಯೆ ಇಲ್ಲದ ಶಾಸ್ತ್ರ ನಡು ಮೊದಲಿಲ್ಲದ ಪುರಾಣವನೋದಲೇತಕ್ಕೆ?' ನುಡಿದ ಸತ್ಯವೆಲ್ಲವು ಸತ್ಯಶುದ್ಧವಾಗಿದ್ದರೆ, ನುಡಿದ ನುಡಿ ನಡೆಯಲಿ ಪೂರೈಸಿದರೆ ಯಾವ ಶಾಸ್ತ್ರ ಪುರಾಣಗಳನ್ನು ಓದಬೇಕಾಗಿಲ್ಲವೆಂದು ಶರಣೆ ಮೋಳಿಗೆಯ ಮಹಾದೇವಿ ಮಾರ್ಮಿಕವಾಗಿ ಹೇಳಿದ್ದಾಳೆ. ಮಾತಿನ ಪಸರದ ವ್ಯವಹಾರದೊಳಗೆ ಸಿಕ್ಕಿ ನೂಕು ತಾಕುಗೊಳುತ್ತಿರ್ಪವಂಗೆ ಮಹದ ಮಾತೇಕೆ? ಅಂಥ ಭೂಭಾರಕರಿಗೆ ಮುಕ್ತಿ ಎಂದೂ ದೊರಕದೆಂದು ಸ್ವತಂತ್ರ ಸಿದ್ಧಲಿಂಗೇಶ್ವರ ಶರಣರು ಹೇಳಿದ್ದಾರೆ. ಮಾತು ಮಾತಿನ ತೂತು ಜ್ಞಾನಿಗಳಿಗೆತ್ತಣ ಶರಣ ಸ್ಥಲವಯ್ಯಾ ಎಂದು ಶರಣ ದೇಶಿಕೇಂದ್ರ ಸಂಗನಬಸವಯ್ಯನವರು ವ್ಯಂಗ್ಯವಾಡಿದ್ದಾರೆ.

**ಭಕ್ತಿ ಪರಿಭಾಷೆಯ ನುಡಿಯ ನುಡಿವೆ, ನುಡಿದಂತೆ ನಡೆವೆ**
**ನುಡಿಯೊಳಗೆ ನಡೆಯ ಪೂರೈಸುವೆ**
**ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ**
**ಒಂದು ಜವೆ ಕೊರತೆಯಾದಡೆ**
**ಎನ್ನನದ್ದಿ ನೀನೆದ್ದು ಹೋಗು ಕೂಡಲಸಂಗಮದೇವಾ.**

ನುಡಿವುದು, ಒಂದೆಡೆಯಾದರೆ; ನುಡಿದಂತೆ ನಡೆವುದೂ ಅಷ್ಟೇ ಮುಖ್ಯವಾದುದು. ನುಡಿದಂತೆ ನಡೆ ಇದೆ ಜನ್ಮ ಕಡೆ ಎಂಬ ನಾಣ್ನುಡಿಯೊಂದಿದೆ. ಭಕ್ತಿ ಸುಭಾಷೆಯ ನುಡಿಯ ನುಡಿವೆ, ನುಡಿದಂತೆ ನಡೆವೆ. ಅದನ್ನು ತೂಗಿ ನೋಡುವ ತಕ್ಕಡಿ ನಿನ್ನ ಕೈಯಲ್ಲಿದೆ. ನನ್ನ ನಡೆಯಲ್ಲಿ ಒಂದು ಜವೆ ಕೊರತೆಯಾದಡೂ ನನ್ನನದ್ದಿ ನೀನೆದ್ದು ಹೋಗು ಎಂದು ಬಸವಣ್ಣನವರು ದೇವರಿಗೆ ಸವಾಲೆಸೆಯುವ ರೀತಿಯಲ್ಲಿ ಹೇಳುತ್ತಾರೆ. ತಮ್ಮ ನಡೆಯಲ್ಲಿ ಅಷ್ಟು ಆತ್ಮವಿಶ್ವಾಸ ಅವರಿಗಿತ್ತು. ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ ಹಿಡಿದಿರ್ದ ಲಿಂಗ ಘಟಸರ್ಪವಯ್ಯಾ, ನುಡಿಗೆ ತಕ್ಕ ನಡೆ ಇಲ್ಲದ ಜಾತಿ ಡೊಂಬರ ನೋಡಿ ನಗುವನಯ್ಯಾ ಕೂಡಲ ಸಂಗಮದೇವಾ ಎಂದು ಹೇಳುತ್ತಾ ನುಡಿಯೊಂದಿಗೆ ನಡೆಯ ಮಹತ್ವವನ್ನು ತಿಳಿಸಿದ್ದಾರೆ. ನುಡಿದಂತೆ ನಡೆಯದೆ ಮಂಡೆ ಬೋಳಿಸಿಕೊಂಡು ಮೆರೆಯುವ ವೇಷ ಡಂಭಕರನ್ನು ಚೆನ್ನಬಸವಣ್ಣನವರು ತೀವ್ರವಾಗಿ ಹಳಿದಿದ್ದಾರೆ.

**ನುಡಿಯಲಿ ಜಾಣನಲ್ಲದೆ ನಡೆಯಲ್ಲಿ ಜಾಣನಲ್ಲದ**
**ಯುಕ್ತಿ ಶೂನ್ಯಂಗೆ ಸಕಳೇಶ್ವರದೇವ**
**ಒಲಿ ಒಲಿ ಎಂದರೆ ಎಂತೊಲಿವನಯ್ಯಾ.**

ನುಡಿಯಂತೆ ನಡೆ ಇಲ್ಲದ ಕಪಟಿಗಳಿಗೆ ದೇವರು ಒಲಿಯನೆಂದು ಸಕಳೇಶ ಮಾದರಸ ಶರಣರು ಹೇಳಿದ್ದಾರೆ. ಮಾತಿನಲ್ಲಿ ಮಹತ್ವ ನುಡಿದು ನೀತಿಯಲ್ಲಿ ಅಧಮರಾದ ಕೀಳು ಮನುಜರು ಎಷ್ಟು ಶಿವಧ್ಯಾನ ಮಾಡಿದರೂ ಬೆಟ್ಟಕ್ಕೆ ನಾಯಿ ಬೊಗಳಿದಂತೆ ನಿರರ್ಥಕವೆಂದು ತೋಂಟದ ಸಿದ್ಧಲಿಂಗ ಯತಿಗಳು ನುಡಿದಿದ್ದಾರೆ. ನೀತಿಯಲ್ಲಿ ಅಧಮರಾಗಿ ಮಾತಿನಲ್ಲಿ ಬೊಮ್ಮವ ನುಡಿವ ಬ್ರಹ್ಮೇತಿಕಾರರ ಮೆಚ್ಚ ನಿಃಕಳಂಕ ಮಲ್ಲಿಕಾರ್ಜುನಾ' ನಡೆನುಡಿ ಏಕವಾಗಿರಬೇಕೆಂದು ಮೋಳಿಗೆಯ ಮಾರಯ್ಯ ಶರಣರು ಒತ್ತಿ ಹೇಳಿದ್ದಾರೆ.

ಕಡುದರ್ಪವೇರಿದ ಒಡಲೆಂಬ ಬಂಡಿಗೆ ಮೃಢ ಶರಣರ ನುಡಿಗಡಣವೇ ಕಡೆಗೀಲು ಕಾಣಾ ರಾಮನಾಥಾ ಎಂದು ಜೇಡರ ದಾಸಿಮಯ್ಯ ಹೇಳಿದರೆ, ಅನಂತಕಾಲ ತಪವ ಮಾಡುವುದರಿಂದ ಒಂದು ನಿಮ್ಮ ಶರಣರ ಅನುಭಾವ ಸಾಲದೆ ಎಂದಿದ್ದಾರೆ ಬಸವಣ್ಣನವರು. ಆನೇನು ಬೇಡೆನು ಸಕಳೇಶ್ವರದೇವಾ ನಿಮ್ಮ ಶರಣರ ಸಂಗವುಳ್ಳಡೆ ಸಾಕು ಎಂದಿದ್ದಾರೆ ಸಕಳೇಶ ಮಾದರಸರು. ಚೆನ್ನಮಲ್ಲಿಕಾರ್ಜುನಾ ನೀ ಕೊಟ್ಟ ಆಯುಷ್ಯವುಳ್ಳನ್ನಕ್ಕರ ಲಿಂಗ ಸುಖಿಗಳ ಸಂಗದಲ್ಲಿ ದಿನಂಗಳಗಳೆವೆನು ಎಂದು ಅಕ್ಕ ಹೇಳಿದ್ದಾಳೆ. ಹೀಗೆ ಶರಣರ ಆಡುಂಬೊಲದಲ್ಲಿ ಅನುಭಾವದಲ್ಲಿ ಇದ್ದು; ನಮ್ಮ ಜೀವನವನ್ನು ಸಾರ್ಥಕಗೊಳಿಸಬೇಕೆಂದು ಅನೇಕ ಶರಣರು ಹೇಳಿದ್ದಾರೆ. ಮುತ್ತಿನ ಹಾರದಂತಿರುವ ಮಾಣಿಕ್ಯದ ದೀಪ್ತಿಯಂತಿರುವ ಸ್ಫಟಿಕದ ಸಲಾಕೆಯಂತಿರುವ ಜ್ಯೋತಿರ್ಲಿಂಗ ಸ್ವರೂಪವೇ ಆಗಿರುವ ಬಸವಾದಿ ಶರಣರ ನುಡಿ ಮುತ್ತುಗಳು ನಮಗೆ ದಾರಿದೀಪಗಳು. ಅವರ ನಡೆಯೇ ನಮಗೆ ಮಾರ್ಗ ದರ್ಶಕವು. ಅವರು ನುಡಿದು ನಡೆದ ದಾರಿಯಲ್ಲಿ ಸಾಗಿದರೆ ನಮ್ಮ ಜೀವನ ಸಫಲವಾಗುವುದರಲ್ಲಿ ಸಂಶಯವಿಲ್ಲ.



ಮಾರ್ಚ್ ೧೧ ರಂದು, ಶ್ರೀ ಸಿದ್ಧಲಿಂಗೇಶ್ವರ ಸನಿವಾಸ ಉನ್ನತ ಪ್ರೌಢಶಾಲೆಯ ಕ್ರೀಡಾ ಹಾಗೂ ಸಾಂಸ್ಕೃತಿಕೋತ್ಸವ–೨೦೨೬ ರ ಬಹುಮಾನ ವಿತರಣೆ ಹಾಗೂ ಶಾರದಾ ಪೂಜಾ ಕಿರಿಯ ಶ್ರೀಗಳಾದ ಪೂಜ್ಯ ಶ್ರೀ ಶ್ರೀ ಶಿವಸಿದ್ಧೇಶ್ವರ ಸ್ವಾಮಿಗಳವರ ಸಾನ್ನಿಧ್ಯದಲ್ಲಿ ನಡೆಯಿತು. ಅಧ್ಯಕ್ಷತೆಯನ್ನು ಶಿಕ್ಷಣಾಧಿಕಾರಿಗಳಾದ ಶ್ರೀ ಎಸ್.ಎನ್.ಸುಧಾಕರ್ ವಹಿಸಿದ್ದರು. ಈ ಸಂದರ್ಭದಲ್ಲಿ ಶ್ರೀಮಠದ ಪ್ರಾಥಮಿಕ ಆರೋಗ್ಯ ಕೇಂದ್ರದ ಮೇಲಾಧಿಕಾರಿಗಳಾದ ಡಾ. ರಶ್ಮಿ ಹಾಗೂ ಶ್ರೀಮತಿ ಕೆ.ಆರ್.ಮಮತಾ, ಮುಖ್ಯ ಶಿಕ್ಷಕರಾದ ಶ್ರೀ ಎಸ್.ಶಿವಕುಮಾರಸ್ವಾಮಿ ಉಪಸ್ಥಿತರಿದ್ದರು.

## ಅಭಿನಂದನೆ

# ಶ್ರೀ ಎಚ್.ಎಸ್.ಸಿದ್ಧಗಂಗಪ್ಪ ಅವರಿಗೆ 'ಶ್ರೀ ಶಿವರಾತ್ರೀಶ್ವರ' ಪ್ರಶಸ್ತಿ ಪ್ರದಾನ



ಹಿರಿಯ ಜಾನಪದ ವಿದ್ವಾಂಸರೂ, ಸಾಹಿತಿಗಳೂ ಹಾಗೂ ಸಿದ್ಧಗಂಗಾ ಮಾಸಪತ್ರಿಕೆಯ ಸಂಪಾದಕರಾದ ಶ್ರೀ ಎಚ್.ಎಸ್.ಸಿದ್ಧಗಂಗಪ್ಪ ಅವರ **'ಶಿವಶರಣರು ಮತ್ತು ಜನಪದ ಕಲೆಗಳು'** ಕೃತಿಗೆ ೨೦೨೩ನೇ ಸಾಲಿನ ಶ್ರೀ ಸುತ್ತೂರು ವೀರಸಿಂಹಾಸನ ಸಂಸ್ಥಾನ ಮಠ ಕೊಡಮಾಡುವ ಪ್ರತಿಷ್ಠಿತ "ಶ್ರೀ ಶಿವರಾತ್ರೀಶ್ವರ' ಪ್ರಶಸ್ತಿಗೆ ಭಾಜನರಾಗಿರುವುದಕ್ಕೆ ಸಿದ್ಧಗಂಗಾ ಪತ್ರಿಕಾ ಬಳಗ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಏಪ್ರಿಲ್ ೧೫ ರಂದು, ನಡೆದ ಭವ್ಯ ಸಮಾರಂಭವದಲ್ಲಿ ಶ್ರೀ ಸುತ್ತೂರು ಜಗದ್ಗುರು ಪರಮಪೂಜ್ಯ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಪ್ರದಾನ ಮಾಡಿ ಸನ್ಮಾನಿಸಿ ಆಶೀರ್ವಾದ ಮಾಡಿದರು. ಪ್ರಶಸ್ತಿಯು ೨೫ ಸಾವಿರ ರೂ. ನಗದು, ಸ್ಮರಣಿಕೆ, ಫಲತಾಂಬೂಲವನ್ನೊಳಗೊಂಡಿದೆ.

ಶ್ರೀ ಎಚ್.ಎಸ್.ಸಿದ್ಧಗಂಗಪ್ಪನವರು ಕಳೆದ ೫೦ ವರ್ಷಗಳಿಂದ ಜಾನಪದ, ಸಾಹಿತ್ಯ ಹಾಗೂ ಪತ್ರಿಕಾ ಕ್ಷೇತ್ರದಲ್ಲಿ ಸಮರ್ಪಣೆಭಾವದಿಂದ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಅವರು ಜಾನಪದ, ಸಾಹಿತ್ಯ, ಶರಣ ಸಾಹಿತ್ಯ, ಜೀವನಚರಿತ್ರೆ, ವ್ಯಕ್ತಿ ಪರಿಚಯ ಸೇರಿದಂತೆ ೬೦ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಕರ್ನಾಟಕ ಜನಪದ ಕಲೆಗಳು, ಜ್ಞಾನದಾಸೋಹ ಮಣಿಮಾಲೆಯ ೧೦೮ ಕೃತಿಗಳು, ಸಂದರ್ಭ ಸಂಚಿಕೆಗಳು, ಅಭಿನಂದನ ಗ್ರಂಥಗಳು ಸೇರಿದಂತೆ ೧೬೦ಕ್ಕೂ ಹೆಚ್ಚು ಕೃತಿಗಳನ್ನು ಸಂಪಾದಿಸಿದ್ದಾರೆ. ಬೆಂಗಳೂರು ಹಾಗೂ ಭದ್ರಾವತಿ ಆಕಾಶವಾಣಿ ನಿಲಯಗಳಿಂದ ೧೧೦ಕ್ಕೂ ಹೆಚ್ಚು ರೂಪಕಗಳು, ಭಾಷಣಗಳು, ಚಿಂತನೆಗಳು ಪ್ರಸಾರವಾಗಿವೆ. ವಿವಿಧ ಪತ್ರಿಕೆಗಳಿಗೆ, ಅಭಿನಂದನ ಗ್ರಂಥಗಳಿಗೆ ೬೦೦ಕ್ಕೂ ಹೆಚ್ಚು ಲೇಖನಗಳನ್ನು ಬರೆದಿದ್ದಾರೆ.

ಕನ್ನಡ ನುಡಿ, ಮಹಾಮನೆ, ಕರ್ನಾಟಕ ವಿಕಾಸ ಪತ್ರಿಕೆಗಳ ಸಂಪಾದಕರಾಗಿಯೂ ಸೇವೆ ಸಲ್ಲಿಸಿದ್ದಾರೆ.

**ಪ್ರಶಸ್ತಿ-ಗೌರವ :** ಶ್ರೀ ಸಿದ್ಧಗಂಗಪ್ಪನವರು ಜಾನಪದ, ಸಾಹಿತ್ಯ ಹಾಗೂ ಪತ್ರಿಕಾ ಕ್ಷೇತ್ರದಲ್ಲಿ ಸಲ್ಲಿಸಿದ ಗಣನೀಯ ಸೇವೆಗಾಗಿ ಅನೇಕ ಸಂಘ ಸಂಸ್ಥೆಗಳು ಪ್ರಶಸ್ತಿ ನೀಡಿ ಗೌರವಿಸಿವೆ. ಅವುಗಳಲ್ಲಿ ಕುವೆಂಪು ವಿಶ್ವಮಾನವ ಪ್ರಶಸ್ತಿ, ಶರಣ ಜ್ಯೋತಿ ಪ್ರಶಸ್ತಿ, ಪರಮೇಶ ಪುಲಕೇಶಿ ಪ್ರಶಸ್ತಿ, ಜಾನಪದ ಸಾಹಿತ್ಯರತ್ನ, ಸಿದ್ಧಗಂಗಾ ಶಿವಕುಮಾರಶ್ರೀ ಪ್ರಶಸ್ತಿ, ಸಾಹಿತ್ಯಸಿರಿ, ಅಖಿಲ ಭಾರತ ಕನ್ನಡ ಸಾಹಿತ್ಯ ಪರಿಷತ್ತಿನ ಊರ್ಡಿಗೆರೆ ಹೋಬಳಿ ಘಟಕದ ಕನ್ನಡ ಸಾಹಿತ್ಯ ಸಮ್ಮೇಳನದ ಸಮ್ಮೇಳನಾಧ್ಯಕ್ಷರಾಗಿ ಗೌರವ. ಸರ್.ಎಂ.ವಿಶ್ವೇಶ್ವರಯ್ಯ ರಾಷ್ಟ್ರೀಯ ಪ್ರಶಸ್ತಿ, ಸಾತ್ವಿಕ ಪ್ರಶಸ್ತಿ, ಶರಣ ಸಾಹಿತ್ಯ ಸೇವಾಭೂಷಣ ರತ್ನ, ತುಮಕೂರು







ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಸಾರ್ಥಕ ಸೇವಾರತ್ನ, ರಮಣಶ್ರೀ ಶರಣ ಪ್ರಶಸ್ತಿ ಹಾಗೂ 'ಸಿದ್ಧಗಂಗಾ ಸಾಹಿತ್ಯರತ್ನ' ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

**ಕೃತಿಗಳಿಗೆ ಬಹುಮಾನ :** ಇವರ ಹೂತಿಟ್ಟ ಹಣವೆಲ್ಲ ಮಣ್ಣಾಗಿ ಹೋದಾಗ – ಕರ್ನಾಟಕ ಜಾನಪದ ಟ್ರಸ್ಟ್‌ನವರು ಏರ್ಪಡಿಸಿದ್ದ ರಾಜ್ಯ ಮಟ್ಟದ ನಾಟಕ ಸ್ಪರ್ಧೆಯಲ್ಲಿ ಬಹುಮಾನ, 'ಸಾಕುಮಾಡೋ ಶಿವನ' ಕೃತಿಗೆ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯವರು ಏರ್ಪಡಿಸಿದ್ದ ರಾಜ್ಯಮಟ್ಟದ ನಾಟಕ ಸ್ಪರ್ಧೆಯಲ್ಲಿ ಬಹುಮಾನ. ಕನ್ನಡ ಸಾಹಿತ್ಯ ಪರಿಷತ್ತು ನವರಸಾಕ್ಷರತೆಗೆ ಏರ್ಪಡಿಸಿದ್ದ ರಾಜ್ಯಮಟ್ಟದ ಸ್ಪರ್ಧೆಯಲ್ಲಿ 'ರಂಗಣ್ಣನ ಕಥೆ' ಕೃತಿಗೆ ಬಹುಮಾನ. ಜಾನಪದ ಸಂಶೋಧನಾ ತೆನೆಗಳು ಗ್ರಂಥಕ್ಕೆ ಗೊ.ರು.ಚ. ಜಾನಪದ ಸಾಹಿತ್ಯ ದತ್ತಿ ಪ್ರಶಸ್ತಿ, 'ಬಹುಮುಖ ಜಾನಪದ' ಗ್ರಂಥಕ್ಕೆ ಸರ್.ಎಂ.ವಿಶ್ವೇಶ್ವರಯ್ಯ ರಾಷ್ಟ್ರೀಯ ಪ್ರಶಸ್ತಿ, 'ಕರ್ನಾಟಕದ ಸಾಧನೆ ಸಂಪನ್ನರು' ಗ್ರಂಥಕ್ಕೆ ಅಡ್ವೈಸರಿ ರಾಜ್ಯ ಪ್ರಶಸ್ತಿ ಹಾಗೂ ಡಾ.ಪಂಡಿತ ಪುಟ್ಟರಾಜ ಪುರಸ್ಕಾರ ಸಾಹಿತ್ಯ ರಾಜ್ಯ ಪ್ರಶಸ್ತಿ ದೊರೆತಿದೆ.

ಶ್ರೀ ಸಿದ್ಧಗಂಗಪ್ಪನವರಿಗೆ ಅವರಿಗೆ ಆರೋಗ್ಯ, ಆಯುಷ್ಯ ಹಾಗೂ ಇನ್ನೂ ಪ್ರತಿಷ್ಠಿತ ಪ್ರಶಸ್ತಿಗಳು ದೊರೆಯುವಂತೆ ಶ್ರೀ ಸಿದ್ಧಗಂಗಾ ಗುರುಪರಂಪರೆ ಆಶೀರ್ವದಸಲಿ ಎಂದು 'ಸಿದ್ಧಗಂಗಾ' ಪತ್ರಿಕಾ ಬಳಗದ ಪರವಾಗಿ ಪ್ರಾರ್ಥಿಸುತ್ತೇನೆ ಹಾಗೂ ಅಭಿನಂದಿಸುತ್ತೇನೆ.

**– ಕೆ.ಬಿ.ಶಿವಶಂಕರಯ್ಯ**
**ಪ್ರಕಾಶಕರು, ಸಿದ್ಧಗಂಗಾ ಮಾಸಪತ್ರಿಕೆ**

## ಶ್ರೀವಾಣಿ

**ನಮ್ಮ ಸಂಪ್ರದಾಯಬದ್ಧ ಆಚರಣೆಗಳು ಆಡಂಬರದ ಉತ್ಸವಗಳಾಗಬಾರದು. ನಮ್ಮ ನಡೆ–ನುಡಿಗಳನ್ನು ತಿದ್ದಿಕೊಂಡು ಅರಿವಿನಿಂದ ಮುನ್ನಡೆಸುವ ಅರ್ಥವಂತಿಕೆಯ ಕಾರ್ಯಕ್ರಮಗಳಾಗಬೇಕು.**

* * *

**ಭೂಮಿ, ನೀರು, ಗಾಳಿ, ಸೂರ್ಯ, ಅಗ್ನಿ ಮೊದಲಾದ ಪಂಚಭೂತಗಳು ಬೇಸರಿಸದೆ ನಿತ್ಯ ಜನೋಪಕಾರಿಯಾಗಿವೆ. ಅಂದಾಗ ಗಾಳಿ, ನೀರು, ಬೆಳಕು ಹಾಗೂ ಭೂಮಿ ಕೊಟ್ಟ ಬೆಳೆಯನ್ನು ಅನುಭವಿಸುತ್ತಿರುವ ನಾವು ಜನೋಪಕಾರಿಗಳಾಗಿ ಬದುಕಬೇಕಾಗಿದೆ.**

## 'ಸಿದ್ಧಗಂಗಾ' ಮಾಸಪತ್ರಿಕೆ ಆಜೀವ ಸದಸ್ಯರಲ್ಲಿ ಮನವಿ

ಶ್ರೀಮಠದ ಮುಖವಾಣಿ ಸಿದ್ಧಗಂಗಾ ಮಾಸಪತ್ರಿಕೆಗೆ ಆಜೀವ ಸದಸ್ಯರಾಗಿರುವುದು ಸಂತೋಷ. ಇದರಿಂದ **'ಸಿದ್ಧಗಂಗಾ'** ನಿರಂತರವಾಗಿ ನಿಮ್ಮ ಮನ–ಮನೆ ಬೆಳಗುತ್ತಲಿದೆ. ತಮಗೆ ಮಠದ ಪರವಾಗಿ ಧನ್ಯವಾದಗಳು.

ಕಾಗದ, ಮುದ್ರಣ, ಅಂಚೆ ವೆಚ್ಚ ಇನ್ನಿತರೆ ವೆಚ್ಚಗಳು ದುಬಾರಿಯಾಗಿದ್ದು, ಪತ್ರಿಕೆ ಮುನ್ನಡೆಸಲು ಕಷ್ಟವಾಗುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಲೇ ಬರುತ್ತಿದ್ದೇವೆ.

ಪ್ರಾರಂಭಕ್ಕೆ ೫೦೦/– ರೂ, ೧೦೦೦/–ರೂ ಆಜೀವ ಸದಸ್ಯರಾಗಲು ಚಂದಾ ಸಂದಾಯ ಮಾಡಿದ್ದಿರಿ. ಇದರಿಂದ ಬ್ಯಾಂಕ್ ಠೇವಣಿಯಿಂದ ಬರುವ ಬಡ್ಡಿ ಕೇವಲ ೫೦/– ರೂ, ೧೦೦/– ಮಾತ್ರ. ಇಷ್ಟು ಕನಿಷ್ಠ ಹಣದಿಂದ ಪತ್ರಿಕೆ ಮುದ್ರಣ ತೊಡಕಾಗಿ ನಷ್ಟವಾಗುತ್ತಿದೆ. ಪ್ರಯುಕ್ತ ಈ ಆರ್ಥಿಕ ಕೊರತೆಯನ್ನು ದಯವಿಟ್ಟು ಅರ್ಥಮಾಡಿ ಕೊಳ್ಳುವಿರೆಂದು ಭಾವಿಸಿದ್ದೇವೆ.

**ಪ್ರಸ್ತುತ ದಶವಾರ್ಷಿಕ ಚಂದಾ, ೨೦೨೫ ವರ್ಷದಿಂದ ೨೫೦೦/– ರೂ ನಿಗದಿ ಮಾಡಿದೆ. ಈ ಮೊತ್ತಕ್ಕೆ ಹೊಂದುವಂತೆ ಹಿಂದೆ ೫೦೦/– ರೂ ಸಂದಾಯ ಮಾಡಿರುವವರು ಬಾಕಿ ೨೦೦೦/– ರೂ ಸಂದಾಯ ಮಾಡಬೇಕು. ೧೦೦೦/– ರೂ ಸಂದಾಯ ಮಾಡಿರುವವರು ಬಾಕಿ ೧೫೦೦/– ಸಂದಾಯ ಮಾಡಲು ಕೋರಿದೆ.**

ದಯಮಾಡಿ ತಮಗೆ ಅನ್ವಯಿಸುವ ಬಾಕಿ ಚಂದಾ ಮೊತ್ತವನ್ನು **ಸಿದ್ಧಗಂಗಾ ಮಾಸಪತ್ರಿಕೆ** ಹೆಸರಿನಲ್ಲಿ **ನಗದು/ಚೆಕ್/ಡಿ.ಡಿ.** ಮೂಲಕ ತಪ್ಪದೆ ಪತ್ರಿಕೆ ಆಜೀವ ಸದಸ್ಯತ್ವದ (LM) ಸಂಖ್ಯೆ ನಮೂದಿಸಿ ದೂರವಾಣಿ/ಮೊಬೈಲ್ ನಂಬರ್‌ನೊಂದಿಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ ಕೊಡುವುದರ ಮೂಲಕ **'ಸಿದ್ಧಗಂಗಾ'** ಮುನ್ನಡೆಗೆ ಸಹಕರಿಸಬೇಕಾಗಿ ಕಳಕಳಿಯಿಂದ ಪ್ರಾರ್ಥಿಸುತ್ತೇವೆ. ವಿಳಾಸ ಬದಲಾವಣೆಯಾಗಿದ್ದರೆ ದಯವಿಟ್ಟು ಬದಲಾದ ವಿಳಾಸ ಹಾಗೂ ತಮ್ಮ ದೂರವಾಣಿ ಸಂಖ್ಯೆಯನ್ನು ತಮ್ಮ (LM) ಸಂಖ್ಯೆಯೊಂದಿಗೆ ಕಾರ್ಡಿನಲ್ಲಿ ಬರೆದು ಕಳುಹಿಸಿಕೊಟ್ಟರೆ ಪತ್ರಿಕೆ ತಮಗೆ ತಲುಪಲು ಅನುಕೂಲವಾಗುತ್ತದೆ.

**ಪ್ರಕಾಶಕರು,**
'ಸಿದ್ಧಗಂಗಾ' ಮಾಸಪತ್ರಿಕೆ,
ಶ್ರೀ ಸಿದ್ಧಗಂಗಾ ಮಠ, ತುಮಕೂರು ಜಿಲ್ಲೆ–೫೭೨ ೧೦೪.
**ದೂರವಾಣಿ : ೦೮೧೬–೨೨೮೨೩೨೨**

## ಕ್ಷೇತ್ರವಾರ್ತೆ

# ಶಿವತತ್ತ್ವ ಚಿಂತನಾಗೋಷ್ಠಿ-೩೩



ಏಪ್ರಿಲ್ ೨ ರಂದು, 'ಶಿವತತ್ತ್ವ ಚಿಂತನಾ ಗೋಷ್ಠಿ'ಯ ೩೩ನೇ ಕಾರ್ಯಕ್ರಮ ಶ್ರೀಹಳೇ ಮಠದಲ್ಲಿ ನಡೆಯಿತು. ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ದಿವ್ಯ ಆಶೀರ್ವಾದದೊಂದಿಗೆ ಕಿರಿಯ ಶ್ರೀಗಳಾದ ಪೂಜ್ಯ ಶ್ರೀ ಶ್ರೀ ಶಿವಸಿದ್ಧೇಶ್ವರ ಸ್ವಾಮಿಗಳವರು ಹಾಗೂ ವಿವಿಧ ಮಠಗಳ ಹರಗುರು ಚರಮೂರ್ತಿಗಳು ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಈ ಚಿಂತನ ಗೋಷ್ಠಿಯಲ್ಲಿ "ಶರಣಪಥದ ಬೆಳಕಾಗಿ ಅಕ್ಕಮಹಾದೇವಿ" ಎಂಬ ವಿಷಯವನ್ನು ಕುರಿತು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯ ಉಪನ್ಯಾಸಕರಾದ ಡಾ. ಜಿ.ವಿ.ಮಂಜುನಾಥ್ ಅವರು "ಮಹಾದೇವಿ ಅತ್ಯಂತ ಕಿರಿಯ ವಯಸ್ಸಿನಲ್ಲಿಯೇ ಅಧ್ಯಾತ್ಮದ ತುತ್ತತುದಿಯನ್ನೇರಿದವರು. ಅನುಭಾವಜ್ಯೋತಿ ಅಲ್ಲಮರಿಂದ, ಭಕ್ತಿ ಭಂಡಾರಿ ಬಸವಣ್ಣನವರಿಂದ ಹಾಗೂ ಎಲ್ಲಾ ಶರಣರಿಂದ ಮೆಚ್ಚುಗೆಯನ್ನು ಪಡೆದು ಗೌರವಿಸಲ್ಪಟ್ಟವರು. ಅವರ ಸಾಧನೆಯಿಂದಾಗಿ ಅವರನ್ನು ಶರಣ ಸಂಕುಲ ಅಕ್ಕ ಎಂದು ಸಂಭೋದಿಸಿ ಗೌರವಿಸಿತು. ಅವರು ವಿಶ್ವ ಸ್ತ್ರೀಕುಲಕ್ಕೆ ಮಾದರಿಯಾಗಿದ್ದಾರೆ" ಎಂದರು. ೧೯೭೨ ರಲ್ಲಿ ಅಂದಿನ ಕಂದಾಯ ಸಚಿವರಾದ ಶ್ರೀ ಕಡಿದಾಳ್ ಮಂಜಪ್ಪನವರ ಹಾಗೂ ತರಳಬಾಳು ಜಗದ್ಗುರು ಶ್ರೀ ಶ್ರೀ ಶಿವಕುಮಾರ ಶಿವಾಚಾರ್ಯರ ಪ್ರಯತ್ನದಿಂದಾಗಿ ಉಡುತಡಿಯಲ್ಲಿ ಕೌಶಿಕನ ಕೋಟೆಯಿದ್ದ ೧೫ ಎಕ್ಕರೆ ಭೂಪ್ರದೇಶವು ಕಾನೂನು ರೀತಿಯಲ್ಲಿ 'ಅಕ್ಕಮಹಾದೇವಿ ಮೀಸಲು ಪ್ರದೇಶ' ಎಂದು ಘೋಷಣೆಯಾಗಿದ್ದನ್ನು ಸ್ಮರಿಸಿದರು.

ಪೂಜ್ಯ ಶ್ರೀ ಶಿವಸಿದ್ಧೇಶ್ವರ ಸ್ವಾಮಿಗಳವರು ತಮ್ಮ ತಿಂಗಳ ಬೆಳಕಿನ ನುಡಿಯಲ್ಲಿ, 'ಸಮಾಜಸೇವೆಯಲ್ಲಿ ಮಠಮಾನ್ಯಗಳ ಪಾತ್ರ' ಎನ್ನುವ ವಿಷಯವನ್ನು ಕುರಿತು ಮಾತನಾಡುತ್ತಾ, ಕರ್ನಾಟಕದ ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯಲ್ಲಿ ವೀರಶೈವ ಲಿಂಗಾಯತ ಮಠಮಾನ್ಯಗಳ ಪಾತ್ರ ಗಣನೀಯವಾದದ್ದು' ಎಂದು ತಿಳಿಸಿದರು.

ತುಮಕೂರು ಬಸವ ಕೇಂದ್ರದ ಶರಣೆಯರು ಸಾಮೂಹಿಕವಾಗಿ ಪ್ರಾರ್ಥನೆ ಸಲ್ಲಿಸಿದರು. ನಂಜನಗೂಡು ಶರಣ ಸಂಗಮ ಮಠದ ಕಿರಿಯ ಶ್ರೀಗಳಾದ ಪೂಜ್ಯ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳು ಸ್ವಾಗತಿಸಿದರು. ಕುಣಿಗಲ್ ಹಿರೇಮಠದ ಪೂಜ್ಯ ಶ್ರೀ ಶ್ರೀ ವೀರರುದ್ರ ಶಿವಾಚಾರ್ಯ ಸ್ವಾಮಿಗಳು ವಚನಾರ್ಥಚಿಂತನೆ ನಡೆಸಿಕೊಟ್ಟರು. ವಿಜಿಪುರ ಬಸವ ಕಲ್ಯಾಣ ಮಠದ ಕಿರಿಯ ಶ್ರೀಗಳಾದ ಪೂಜ್ಯ ಶ್ರೀ ಶ್ರೀ ಸದಾಶಿವ ಸ್ವಾಮಿಗಳು ಶರಣು ಸಮರ್ಪಣೆ ಮಾಡಿದರು. ಮುಖ್ಯ ಶಿಕ್ಷಕರಾದ ಎಸ್.ಪಿ.ಸಿದ್ಧಲಿಂಗಸ್ವಾಮಿ ಕಾರ್ಯಕ್ರಮ ನಿರೂಪಿಸಿದರು.

ಹಿರಿಯ ವಿದ್ವಾಂಸರಾದ ಶ್ರೀ ಕೋರಂಬ ಅವರು, ತುಮಕೂರು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ತುಮಕೂರು ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತು, ಜಿಲ್ಲಾ ಮಹಿಳಾ ಬಸವ ಕೇಂದ್ರ, ಕದಳಿ ವೇದಿಕೆ, ತುಮಕೂರು ಈ ಸಂಸ್ಥೆಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ತುಮಕೂರು ನಗರದ ಶರಣ ಶರಣೆಯರು, ಶ್ರೀಮಠದ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗಿಗಳಾಗಿದ್ದರು.

**ವರದಿ: ಎಸ್.ಪಿ.ಸಿದ್ಧಲಿಂಗಸ್ವಾಮಿ**

ವರದಿ

# ಕಲಬುರ್ಗಿಯಲ್ಲಿ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಗುರುವಂದನ ಮಹೋತ್ಸವ

"ಅನಕ್ಷರತೆ, ಹಸಿವು, ಅಸಮಾನತೆ, ಅಂಧಕಾರ, ಸಂಕಷ್ಟಗಳು ಇರುವ ವೇಳೆಯಲ್ಲಿ ಸಹಸ್ರಾರು ಭಕ್ತರಿಗೆ ಮತ್ತು ವಿದ್ಯಾರ್ಥಿಗಳಿಗೆ ಅನ್ನ, ಆಶ್ರಯ, ಅರಿವಿನ ತ್ರಿವಿಧ ದಾಸೋಹಗೈದು, ಶಾಶ್ವತ ಕಲ್ಯಾಣಕ್ಕೆ ಶ್ರಮಿಸಿದವರು ಶ್ರೀ ಶಿವಕುಮಾರ ಸ್ವಾಮೀಜಿಯವರು" ಎಂದು ಸಿದ್ಧಗಂಗಾ ಮಠದ ಕಿರಿಯ ಶ್ರೀಗಳಾದ ಪೂಜ್ಯ ಶ್ರೀ ಶ್ರೀ ಶಿವಸಿದ್ಧೇಶ್ವರ ಸ್ವಾಮೀಜಿ ಅವರು ಹೇಳಿದರು.

ನಗರದ ವೀರಶೈವ ಕಲ್ಯಾಣ ಮಂಟಪದಲ್ಲಿ ಏಪ್ರಿಲ್ ೧೨ ರಂದು, ಶ್ರೀ ಸಿದ್ಧಗಂಗಾ ಹಳೇ ವಿದ್ಯಾರ್ಥಿಗಳ ಹಾಗೂ ಹಿತೈಷಿಗಳ ಸಂಘ ಮತ್ತು ಜಿಲ್ಲಾ ವೀರಶೈವ ಸಮಾಜದಿಂದ ಆಯೋಜಿಸಿದ್ದ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಶಿವಯೋಗಿಗಳ ೧೧೮ನೇ ಜನ್ಮದಿನೋತ್ಸವ ಹಾಗೂ ಗುರುವಂದನ ಮಹೋತ್ಸವ ಮತ್ತು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

"ಬಡ ಮಕ್ಕಳಿಗೆ ಸಂಸ್ಕಾರ ನೀಡಿದರು. ಗ್ರಾಮೀಣ ಭಾಗದಲ್ಲಿ ಅರಿವಿನ ಜ್ಯೋತಿ ಬಿತ್ತಲು ಬಸವ ಜ್ಯೋತಿ ಸಂಘಟನೆಯನ್ನು ಮಾಡಿದರು. ಕಾಯಕ, ದಾಸೋಹ, ವಚನಗಳ ಸಾರಲು ಜಗಜ್ಯೋತಿ ಬಸವೇಶ್ವರ ನಾಟಕವನ್ನು ಹಳ್ಳಿ ಹಳ್ಳಿಗಳಿಗೆ ತಲುಪಿಸಿ, ಅರಿವು ಮೂಡಿಸಿದರು" ಎಂದು ಸ್ಮರಿಸಿದರು.

"ನಾಗರಿಕತೆ ಮತ್ತು ಸಂಸ್ಕೃತಿ ತೊಟ್ಟಿಲಾಗಿರುವ ಭಾರತಕ್ಕೆ ಅಧ್ಯಾತ್ಮವೇ ಆತ್ಮವಾಗಿದೆ. ಜಗತ್ತಿನ ಇತಿಹಾಸದಲ್ಲಿ ಭಾರತಕ್ಕೆ ವಿಶಿಷ್ಟ ಸ್ಥಾನವಿದೆ. ಪರಕೀಯರ ದಾಳಿಯಿಂದ ಇಲ್ಲಿನ ಭಾಷೆ, ಆಡಳಿತ ಬದಲಾಗಿರಬಹುದು, ಆದರೆ ಅಧ್ಯಾತ್ಮ ಕ್ಷೇತ್ರ ಅಚಲವಾಗಿ ಉಳಿದಿದೆ. ನಾಗರಿಕತೆ ಹುಟ್ಟುವ ಮೊದಲೇ ಭಾರತದಲ್ಲಿ ಸಂಸ್ಕೃತಿ ಇತ್ತು. ನಮ್ಮ ನೆಲದಲ್ಲಿ ಗುರುಗಳು ಬಂದು








ಹೋಗಿದ್ದು, ಕಾಯಕ ಮತ್ತು ದಾಸೋಹದ ಮೂಲಕ ಸಿದ್ಧಗಂಗಾ ಕ್ಷೇತ್ರವನ್ನು 'ಕಲ್ಯಾಣ ಕ್ಷೇತ್ರ'ವನ್ನಾಗಿ ಮಾಡಿದ ಪರಮಪೂಜ್ಯ ಶ್ರೀ ಶ್ರೀ ಶಿವಕುಮಾರ ಶ್ರೀಗಳ ತತ್ತ್ವಗಳು ವಿಶ್ವಕ್ಕೇ ದಾರಿದೀಪ" ಎಂದು ಹೇಳಿದರು.

ಬೆಳಗುಂಪಾದ ಪೂಜ್ಯ ಶ್ರೀ ಶ್ರೀ ಪರ್ವತೇಶ್ವರ ಶಿವಾಚಾರ್ಯರು ಹಾಗೂ ಶ್ರೀನಿವಾಸ ಸರಡಗಿಯ ಮಹಾಲಕ್ಷ್ಮೀ ಶಕ್ತಿಪೀಠದ ಅಪ್ಪಾರಾವ ದೇವಿಮುತ್ಯಾ ಮಾತನಾಡಿ, "ಶಿವಕುಮಾರ ಸ್ವಾಮೀಜಿ ಸಮಾಜವನ್ನೇ ಶಕ್ತಿ ಎಂದು ನಂಬಿಸಿ ಜೋಳಿಗೆ ಹಿಡಿದು ದಾಸೋಹ ಮಾಡಿದವರು. ಪ್ರತಿವರ್ಷ ೧೦ ಸಾವಿರ ಮಕ್ಕಳನ್ನು ಸ್ವಂತ ಮಕ್ಕಳಂತೆ ಕಂಡು ಅಕ್ಷರ ಕಲಿಸಿದ ದಾಸೋಹ ಮೂರ್ತಿಗಳು" ಎಂದರು.

ಸಂಘದ ಅಧ್ಯಕ್ಷ ಶ್ರೀ ಅರುಣಕುಮಾರ ಪಾಟೀಲ್ ಕೊಡಲಹಂಗರಗಾ ಸ್ವಾಗತಿಸಿ, "೧೯೯೦ರ ದಶಕದಲ್ಲೇ ನಮ್ಮ ಜಿಲ್ಲೆಯ ಸುಮಾರು ೫೦೦ ವಿದ್ಯಾರ್ಥಿಗಳು ಸಿದ್ಧಗಂಗಾ ಮಠದಲ್ಲಿ ಕಲಿಯುತ್ತಿದ್ದೆವು. ಶಿಕ್ಷಣದ ಜತೆಗೆ ನೈತಿಕ ಮೌಲ್ಯಗಳನ್ನು ನೀಡಿದ್ದು ಸಿದ್ಧಗಂಗಾ ಮಠ. ೮೦ ವಿದ್ಯಾರ್ಥಿಗಳಿಂದ ೧೦ ಸಾವಿರ ಮಕ್ಕಳಿಗೆ ಉಚಿತ ಶಿಕ್ಷಣ, ವಸತಿ, ಅನ್ನ ನೀಡಲಾಗುತ್ತಿದೆ" ಎಂದರು.

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಅನುಪಮ ಸೇವೆ ಸಲ್ಲಿಸಿದ ಗಣ್ಯರನ್ನು ಸನ್ಮಾನಿಸಲಾಯಿತು. ಶ್ರೀಮತಿ ಸುಧಾ ನಾಯಕ ಅವರಿಗೆ 'ಸಿದ್ದಗಂಗಾಶ್ರೀ' ಪ್ರಶಸ್ತಿ. ಶ್ರೀ ಹಣಮಂತಪ್ಪ ಬೆಳಗುಂಪಾ ಮತ್ತು ಶ್ರೀ ಕಾಶೀನಾಥ ಬಿ. ಪಾಟೀಲ್ ಅವರಿಗೆ 'ಶಿವಕುಮಾರಶ್ರೀ' ಪ್ರಶಸ್ತಿ. ಶ್ರೀಮತಿ ಮಂಜುಳಾ ಬಿ. ಅವರಿಗೆ 'ಸಂಘಸಿರಿ' ಪ್ರಶಸ್ತಿ ಹಾಗೂ ಶ್ರೀ ಮಹೇಂದ್ರ ಬಿರಾದಾರ ಅವರಿಗೆ ವಿಶೇಷ ಸನ್ಮಾನ ಮಾಡಲಾಯಿತು.

ಶ್ರೀ ಶರಣಬಸವೇಶ್ವರ ಸಂಸ್ಥಾನ ಪೀಠಾಧಿಪತಿ ಪೂಜ್ಯ ಶ್ರೀ ಶ್ರೀ ದೊಡ್ಡಪ್ಪ ಅಪ್ಪ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಜಗದ್ಗುರು ಡಾ. ಶ್ರೀ ಶ್ರೀ ಸಾರಂಗಧರ ದೇಶಿಕೇಂದ್ರ ಸ್ವಾಮೀಜಿ ನೇತೃತ್ವ ವಹಿಸಿದ್ದರು. ನಿಡಗುಂಡಾದ ಪೂಜ್ಯ ಶ್ರೀ ಶ್ರೀ ಕರುಣೇಶ್ವರ ಶಿವಾಚಾರ್ಯರು, ಚೌದಾಪುರಿಯ ಪೂಜ್ಯ ಶ್ರೀ ಶ್ರೀ ರಾಜಶೇಖರ ಶಿವಾಚಾರ್ಯರು, ವಿಧಾನ ಪರಿಷತ್ ಸದಸ್ಯ ಶ್ರೀ ಬಿ.ಜಿ. ಪಾಟೀಲ್, ಶ್ರೀ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಶ್ರೀ ಬಸವರಾಜ ದೇಶಮುಖ, ಎಚ್‌ಕೆಇ ಸಂಸ್ಥೆ ಉಪಾಧ್ಯಕ್ಷ ಶ್ರೀ ರಾಜಾ ಭೀಮಳ್ಳಿ, ಮುಖಂಡರಾದ ಶ್ರೀ ನೀಲಕಂಠರಾವ ಮೂಲಗೆ, ಶ್ರೀಮತಿ ಜಯಶ್ರೀ ಮತ್ತಿಮಡು, ಶ್ರೀ ಶರಣಕುಮಾರ ಪಾಟೀಲ್, ಶ್ರೀ ಕಲ್ಯಾಣಪ್ಪ ಪಾಟೀಲ್, ಶ್ರೀ ಅಲ್ಲಮಪ್ರಭು ದೇಶಮುಖ, ಶ್ರೀ ಸಂಗಮೇಶ ನಾಗನಹಳ್ಳಿ, ಶ್ರೀ ಶರಣು ಭೂಸನೂರ, ಶ್ರೀ ರಮೇಶ ಬಂಧು, ಶ್ರೀ ಮಲ್ಲಿಕಾರ್ಜುನ ನಾಗನಹಳ್ಳಿ, ಪತ್ರಕರ್ತರ ಸಂಘದ ಅಧ್ಯಕ್ಷ ಶ್ರೀ ಬಾಬುರಾವ ಯಡ್ರಾಮಿ ಇತರರಿದ್ದರು. ಸಮಾಜದ ಪ್ರಧಾನ ಕಾರ್ಯದರ್ಶಿ ಶ್ರೀ ಶ್ರೀಶೈಲ್ ಘೂಳಿ ಸ್ವಾಗತಿಸಿದರು. ಶ್ರೀ ದೇವೇಂದ್ರಪ್ಪ ಅವಂಟಿ ಉಸ್ತುವಾರಿ ವಹಿಸಿದ್ದರು. ಶ್ರೀ ಚನ್ನಬಸಯ್ಯ ಗುರುವಿನ ಕಾರ್ಯಕ್ರಮ ನಿರೂಪಣೆ ಮಾಡಿದರು.

**ವರದಿ: ದೇವೇಂದ್ರಪ್ಪ ಅವಂಟಿ**

# ಸುದ್ದಿ ಚಿತ್ರಗಳು



ಮಾರ್ಚ್ ೨೫ ರಂದು, ಎಡೆಯೂರು ಶ್ರೀ ಸಿದ್ಧಲಿಂಗೇಶ್ವರ ಮಹಾರಥೋತ್ಸವಕ್ಕೆ ಚಾಲನೆ ನೀಡಿದ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಶ್ರೀ ಸಿದ್ಧಲಿಂಗೇಶ್ವರ ದೇಗುಲದಲ್ಲಿ ಹರಗುರು ಚರಮೂರ್ತಿಗಳೊಂದಿಗೆ ಪೂಜೆ ನೆರವೇರಿಸಿದರು.



ಏಪ್ರಿಲ್ ೬ ರಂದು, ದೇವನಹಳ್ಳಿ ಜಿಲ್ಲಾಧಿಕಾರಿ ಕಛೇರಿ ಆವರಣದಲ್ಲಿ ಜಗಜ್ಯೋತಿ ಬಸವೇಶ್ವರರ ಪುತ್ಥಳಿಯನ್ನು ಸುತ್ತೂರು ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಶ್ರೀ ಸಿದ್ಧಗಂಗಾ ಮಠದ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ಲೋಕಾರ್ಪಣೆ ಮಾಡಲಾಯಿತು. ಈ ಸಂದರ್ಭದಲ್ಲಿ ವೀರಶೈವ ಮಹಾಸಭಾದ ಅಧ್ಯಕ್ಷರೂ ಹಾಗೂ ಸಚಿವರಾದ ಶ್ರೀ ಈಶ್ವರಖಂಡ್ರೆ, ಶ್ರೀ ಎಚ್.ಕೆ.ಮುನಿಯಪ್ಪ, ಸಂಸದರಾದ ಡಾ.ಕೆ.ಸುಧಾಕರ, ಮುಖಂಡರು ಹಾಗೂ ಭಕ್ತರು ಉಪಸ್ಥಿತರಿದ್ದರು.



ಏಪ್ರಿಲ್ ೩೧ ರಂದು, ಶ್ರೀಮಠದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ಆಡಳಿತ ಕಛೇರಿಯಲ್ಲಿ ಶ್ರೀ ಎಂ.ಬಾಲಚಂದ್ರ ಅವರು ಸಂಪಾದಿಸಿದ 'ದೇವಮಾನವ ಸಂದೇಶಗಳು' ಹಾಗೂ 'ಯುಗಾವತಾರಿಯ ಅಮರ ಸಂದೇಶಗಳು' ಕೃತಿಗಳನ್ನು ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ಲೋಕಾರ್ಪಣೆ ಮಾಡಿದರು.

ಸ್ಥಾಪನೆ : 1995

ಶುಭಾಶಯಗಳೊಂದಿಗೆ

ಭಾರತೀಯ ರಿಸರ್ವ್ ಬ್ಯಾಂಕ್ ಲೈಸೆನ್ಸ್ ಪುರಸ್ಕೃತ

ದೂರವಾಣಿ : 2277267

ಫ್ಯಾಕ್ಸ್ : 2277267

# ಸಿದ್ಧಗಂಗಾ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಬಿ.ಹೆಚ್.ರಸ್ತೆ, ತುಮಕೂರು-572 102

## ಪ್ರಗತಿ ನೋಟ (31.03.2025ರಲ್ಲಿದ್ದಂತೆ) ಮತ್ತು ಠೇವಣಿಗಳು (ಲಕ್ಷರೂ.ಗಳಲ್ಲಿ)

| | | | |
|---|---|---|---|
| ಸದಸ್ಯರ ಸಂಖ್ಯೆ | 4228 | ಸಾಲಗಳು | 15010.80 |
| ಪಾವತಿಯಾದ ಷೇರು ಬಂಡವಾಳ | 729.80 | ಹೂಡಿಕೆಗಳು | 9223.42 |
| ಆಪದ್ಧನ ಮತ್ತು ನಿಧಿಗಳು | 4980.66 | ದುಡಿಯುವ ಬಂಡವಾಳ | 26116.68 |
| ಠೇವಣಿಗಳು | 20406.21 | ನಿವ್ವಳ ಲಾಭ (ತೆರಿಗೆ ನಂತರ) | 307.34 |

## ಠೇವಣಿ ಮೇಲಿನ ಬಡ್ಡಿ ದರಗಳು

| | | | |
|---|---|---|---|
| 46 ದಿವಸಗಳಿಂದ 90 ದಿವಸಗಳವರೆಗೆ | - ಶೇ. 4% | 181 ದಿವಸಗಳಿಂದ 365 ದಿವಸಗಳವರೆಗೆ | - ಶೇ. 6% |
| 91 ದಿವಸಗಳಿಂದ 180 ದಿವಸಗಳವರೆಗೆ | - ಶೇ. 5% | 1 ವರ್ಷ ಮೇಲ್ಪಟ್ಟು | - ಶೇ. 7.5% |

ಹಿರಿಯ ನಾಗರಿಕರಿಗೆ,

ಒಂದು ವರ್ಷ ಮೇಲ್ಪಟ್ಟ ಠೇವಣಿಗಳ ಮೇಲೆ 1/2 % ಅಧಿಕ ಬಡ್ಡಿ ದರವನ್ನು ಅವರ ಠೇವಣಿಗಳ ಮೇಲೆ ನೀಡಲಾಗುವುದು.

ಐದು ಲಕ್ಷದ ವರೆಗಿನ ಠೇವಣಿಗಳ ಮೇಲೆ ವಿಮಾ ರಕ್ಷಣೆ ಇದೆ.(ಡಿ.ಐ.ಸಿ.ಜಿ.ಸಿ)

ಜಂಟಿ ಸಾಲ, ಗೃಹ ನಿರ್ಮಾಣ ಸಾಲ, ಆಸ್ತಿ ಅಡಮಾನ ಸಾಲ, ಹೊಸ/ಹಳೆಯ ವಾಹನಾಧಾರ ಸಾಲ, ಯಂತ್ರೋಪಕರಣ ಸಾಲ, ವಸ್ತು ಬಳಕೆದಾರ ಸಾಲ, ಮೀರೆಳೆತ, ವೇತನಾಧಾರ, ಚಿನ್ನಾಭರಣ ಸಾಲಗಳಿಗೆ ಬಡ್ಡಿ ದರ ಶೇ.11 ರಿಂದ 14.

## ಶಾಖೆಗಳು :

ಸಿದ್ದಗಂಗಾ ಅರ್ಬನ್ ಕೋ–ಆಪರೇಟೀವ್ ಬ್ಯಾಂಕ್ ಲಿ.,
ಸಿದ್ದಗಂಗಾ ಕಾಲೇಜ್ ಕ್ಯಾಂಪಸ್, ಗಾಂಧಿನಗರ
ಬಿ.ಹೆಚ್,ರಸ್ತೆ, ತುಮಕೂರು–572 101
ಫೋನ್ : 0816–2277273

ಸಿದ್ಧಗಂಗಾ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ.,
ಕೆ.ಎಸ್.ಆರ್.ಟಿ.ಸಿ. ಬಸ್ ಸ್ಟಾಂಡ್ ರಸ್ತೆ,
ಒಕ್ಕಲಿಗರ ಸಮುದಾಯ ಭವನದ ಎದುರು
ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಫೋನ್ : 080–29900052

ಸಿದ್ಧಗಂಗಾ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ.,
ಹಾಸ್ಪಿಟಲ್ ರಸ್ತೆ, ದಾಬಸಪೇಟೆ (ಸೋಂಪುರ)
ನೆಲಮಂಗಲ ತಾ॥, ಬೆಂಗಳೂರು ಗ್ರಾಮಾಂತರ ಜಿಲ್ಲೆ
ಫೋನ್ : 080– 27735409

ಸಿದ್ಧಗಂಗಾ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ.,
ವಿಜಯನಗರ ಶಾಖೆ. 27/1, 3ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ,
ವಿಜಯನಗರ, ಬೆಂಗಳೂರು– 560 040
ಫೋನ್ : 080–23301270

ಶ್ರೀ ಟಿ.ಕೆ. ನಂಜುಂಡಪ್ಪ
ಅಧ್ಯಕ್ಷರು

ಶ್ರೀ ಕೆ.ಎಸ್. ಶಂಕರಯ್ಯ
ಉಪಾಧ್ಯಕ್ಷರು

ನಿರ್ದೇಶಕರು

| | | |
|---|---|---|
| ಶ್ರೀ ಮಹೇಶಪ್ಪ | ಶ್ರೀ ಬಿ.ಎಸ್. ರುದ್ರೇಶಯ್ಯ | ಶ್ರೀ ಎಸ್. ವಿಶ್ವನಾಥ್, CA |
| ಡಾ॥ ಆರ್.ಸಿ. ಪುಟ್ಟಬುದ್ಧಿ | ಶ್ರೀ ಟಿ.ಎಮ್. ಸ್ವಾಮಿ | ಡಾ॥ ಶಿವಕುಮಾರಯ್ಯ |
| ಶ್ರೀಮತಿ ಮಂಜುಳಾ ಪ್ರಸಾದ್ | ಶ್ರೀ ರಾಮಯ್ಯ | ಡಾ॥ ರೇಣುಕಾ ಲತಾ. ಎಸ್. |
| ಡಾ. ಎಸ್. ಪರಮೇಶ್ | ಶ್ರೀ ಚಿಕ್ಕಯ್ಯ. ಆರ್. | ಶ್ರೀ ಕೆ.ಎಮ್. ಸ್ವಾಮಿ |

ವ್ಯವಸ್ಥಾಪನಾ ಮಂಡಳಿ : ಶ್ರೀ ಬಿ.ಎಸ್. ರುದ್ರೇಶಯ್ಯ, ಅಧ್ಯಕ್ಷರು
ನಿರ್ದೇಶಕರು : ಶ್ರೀ ಎಸ್.ವಿಶ್ವನಾಥ್ CA, ಶ್ರೀ ಎಸ್. ವಿಶ್ವನಾಥಯ್ಯ,
ಪ್ರೊ.ಪಿ.ಪರಮಶಿವಯ್ಯ, ಶ್ರೀ ಸಿ.ಆರ್. ರಮೇಶ್,

ಹೆಚ್.ಕೆ. ಶಿವಪ್ರಕಾಶ್
ಮುಖ್ಯಕಾರ್ಯನಿರ್ವಹಣಾಧಿಕಾರಿಗಳು

"Siddaganga" Monthly - Postal Reg. No. L2/RNP/385/TMR/2024-26
Posted at RMS, Tumkur-572 102

RNI No. 17139/69



ಸಿದ್ಧಗಂಗಾ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ



ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮೀಜಿ ಆಸ್ಪತ್ರೆ

ಆರೋಗ್ಯ ದಾಸೋಹದಡಿಯಲ್ಲಿ

ಉಚಿತ*

- ದಾಖಲಾತಿ
- ವೈದ್ಯರ ಸಂದರ್ಶನ
- ಹಾಸಿಗೆ
- ಅಹಾರ

* ಔಷಧಿ, ರೇಡಿಯಾಲಜಿ ಹಾಗೂ ಲ್ಯಾಬ್ ಸೇವೆಗಳನ್ನು ಹೊರತುಪಡಿಸಿ




ರಿಯಾಯಿತಿ ದರದಲ್ಲಿನ ಸೇವೆಗಳು

- ಹೆರಿಗೆ ಸೇವೆಗಳು
- ಶಸ್ತ್ರಚಿಕಿತ್ಸೆ
- ಐಸಿಯು
- ಸೂಪರ್ ಸ್ಪೆಷಾಲಿಟಿ ಸೇವೆಗಳು

0816-2602222 | smcri.edu.in | Siddagangamedicalcollege | siddaganga_hospital

ಡಾ॥ ಶಿವಕುಮಾರಸ್ವಾಮೀಜಿ ರಸ್ತೆ, (ಬಿ.ಹೆಚ್. ರಸ್ತೆ), ತುಮಕೂರು

To

If undelivered please return to :
Editor
Siddaganga Monthly Magazine
Siddaganga Math
Tumkur-572 104

Cover printed at : Geetanjali Graphics, B-71, KSSIDC Indl. Area, 6th Block, Rajajinagar, Bengaluru-10. Ph : 23404232

email ID : geetanjaligraphics@gmail.com